ರೈತ ಕಾರ್ಮಿಕರಲ್ಲಿ ಸ್ಫೂರ್ತಿ ತುಂಬಿದ ಜೂನ್ 11 ರ ಪಿಕೆಟಿಂಗ್

ಲಕ್ಷಾಂತರ ರೈತ - ಕಾರ್ಮಿಕರ ಮುಷ್ಕರ - 25,000 ಜನರ ಬಂಧನ

ಹತ್ತಾರು ವರ್ಷಗಳಿಂದ ಸರ್ಕಾರೀ ಭೂಮಿಯಲ್ಲಿ ಸಾಗುವಳಿ ಮಾಡಿಕೊಂಡು ಬಂದ ಬಡ ಜನರ ಭೂಮಿಗೆ ಹಕ್ಕು ಪತ್ರ ನೀಡಿ ಅದನ್ನು ಸಕ್ರಮಗೊಳಿಸಬೇಕೆಂಬ, ಕೃಷಿ ಕೂಲಿಕಾರರಿಗೆ ಇನ್ನಿತರ ಅಸಂಘಟಿತ ಉದ್ಯಮಗಳ ಕಾರ್ಮಿಕರಿಗೆ ಕನಿಷ್ಠ ಕೂಲಿ ಜ್ಯಾರಿ ಮಾಡಬೇಕೆಂದು ಒತ್ತಾಯಿಸಿ ಜೂನ್ 11 ರಂದು ರಾಜ್ಯಾದ್ಯಂತ ಸರ್ಕಾರೀ ಕಚೇರಿಗಳನ್ನು ಪಿಕೆಟಿಂಗ್ ಮಾಡಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘವು ನೀಡಿದ ಕರೆಗೆ ಓಗೊಟ್ಟ ರಾಜ್ಯದ ರೈತರು ಕೃಷಿ ಕೂಲಿಕಾರರು ಮತ್ತು ಬೇಡಿಕೆಯನ್ನು ಬೆಂಬಲಿಸಿ ಮುಷ್ಕರ ನಡೆಸಿ ಬೀದಿಗಿಳಿದ 1 ಲಕ್ಷದಷ್ಟು ಕಾರ್ಮಿಕರು ಬೀಡಿ, ಹೋಟೆಲ್, ಕಾರ್ಮಿಕರನ್ನೊಳಗೊಂಡು ರಾಜ್ಯಾದ್ಯಂತ ಬೃಹತ್ ಪ್ರದರ್ಶನಗಳನ್ನು ನಡೆಸಿ ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಸರ್ಕಾರೀ ಕಚೇರಿಗಳ ಮುಂದೆ ಪಿಕೆಟಿಂಗ್ ನಡೆಸಿದರು. ಅದರಲ್ಲಿ ಸುಮಾರು 25, 000 ಮಂದಿ ಬಂಧನಕ್ಕೊಳಗಾದರೆಂದು ತಿಳಿದು ಬಂದಿದೆ. ಇಲ್ಲಿನವರೆಗೆ ವಿವಿಧ ಭಾಗಗಳಿಂದ ನಮಗೆ ತಲುಪಿರುವ ವರದಿಗಳನ್ನು ಕ್ರೋಡೀಕರಿಸಿ ಪ್ರಕಟಿಸುತ್ತಿದ್ದೇವೆ. ತಡವಾಗಿ ಬರುವ ವರದಿಗಳನ್ನು ಮುಂದಿನ ಸಂಚಿಕೆಯಲ್ಲಿ ಅಚ್ಚು ಮಾಡುತ್ತೇವೆ.

ರಾಜ್ಯದ ರೈತ-ಕಾರ್ಮಿಕರ ಆಂದೋಲನದಲ್ಲಿ ಜೂನ್ 11 ರ ಕಾರ್ಯಕ್ರಮ ಒಂದು ಹೊಸ ಹೆಜ್ಜೆಯನ್ನಿರಿಸಿದೆ. ರಾಜ್ಯಾದ್ಯಂತ ಅತ್ಯಂತ ವ್ಯಾಪಕ ಪ್ರಮಾಣದಲ್ಲಿ ರೈತರೂ ಕೃಷಿ ಕಾರ್ಮಿಕರೂ ಅತೀವ ಉತ್ಸಾಹದಿಂದ ತಮ್ಮ ಬೇಡಿಕೆಗಳಿಗಾಗಿ ಜಿಲ್ಲಾ ಕೇಂದ್ರಗಳಲ್ಲಿ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಪ್ರದರ್ಶನ ನಡೆಸಿದ್ದಾರೆ. ಸರ್ಕಾರೀ ಕಚೇರಿಗಳಿಗೆ ಮುತ್ತಿಗೆ ಹಾಕಿ ಬಂಧನಕ್ಕೊಳಗಾಗಿದ್ದಾರೆ. ಈ ಚಳವಳಿಯಲ್ಲಿ ಪಾರ್ಟಿಯ, ಸಿಐಟಿಯು ನ ಇನ್ನಿತರ ಸಾಮೂಹಿಕ ಸಂಘಟನೆಗಳ ಮುಖಂಡರುಗಳನ್ನೊಳಗೊಂಡಂತೆ ಸುಮಾರು 25 ಸಾವಿರ ಮಂದಿ ಪೋಲೀಸರಿಂದ ಬಂಧನಕ್ಕೊಳಗಾಗಿದ್ದಾರೆ. ಅದರಲ್ಲಿ ಪಾರ್ಟಿಯ ರಾಜ್ಯ ಸೆಕ್ರೆಟೇರಿಯೇಟ್ ಸದಸ್ಯರುಗಳಾದ ಕಾ। ಪಿ. ರಾಮಚಂದ್ರರಾವ್, ಎಸ್. ಸೂರ್ಯನಾರಾಯಣರಾವ್, ಸಿ. ನಂಜುಂಡಪ್ಪ. ವಿ. ಜೆ. ಕೆ. ನಾಯರ್, ಎನ್. ಎಲ್. ಉಪಾಧ್ಯಾಯ ಅವರುಗಳು ಬೆಂಗಳೂರಿನಲ್ಲೂ, ಕಾ। ಎನ್. ಕೆ. ಉಪಾಧ್ಯಾಯರು ಬಿಜಾಪುರದಲ್ಲೂ ಕಾ। ಕೆ. ಆರ್. ಶ್ರೀಯಾನ್ ಮಂಗಳೂರಿನಲ್ಲೂ ಬಂಧಿಸಲ್ಪಟ್ಟಿದ್ದರು. ಅಲ್ಲದೆ ಪಾರ್ಟಿಯ ರಾಜ್ಯ ಸಮಿತಿ ಸದಸ್ಯರುಗಳೂ ವಿವಿಧ ಕಡೆಗಳಲ್ಲಿ ಬಂಧನಕ್ಕೊಳಗಾಗಿದ್ದಾರೆ. ಜಿಲ್ಲಾವಾರು ನಡೆದ ಒಟ್ಟು ಬಂಧನಗಳು ಹೀಗಿವೆ : ದಕ್ಷಿಣ ಕನ್ನಡ-8000, ಬೆಂಗಳೂರು-1000, ಗುಲ್ಬರ್ಗಾ-1000, ಬಿಜಾಪುರ-1000, ರಾಯಚೂರು-1500 ಕೋಲಾರ-1000, ಧಾರವಾಡ-1800, ತುಮಕೂರು- 300, ಹಾಸನ ಮತ್ತು ಚಿಕ್ಕಮಗಳೂರು-1‸00, ಚಿತ್ರದುರ್ಗ-300, ಕೊಡಗು-200 ಬೆಳಗಾವಿ-500, ಮೈಸೂರು-300. ಪ್ರದರ್ಶನ, ಪಿಕೆಟಿಂಗ್ ಕಾರ್ಯಕ್ರಮದ ವಿವರಗಳು ಹೀಗಿವೆ —

ಬೆಂಗಳೂರು

ಜೂನ್ 11 ರಂದು ಬೆಳಿಗ್ಗೆ 11·30 ಗಂಟೆಗೆ ಸಿಲ್ವರ್ ಜ್ಯೂಬಿಲಿ ಪಾರ್ಕ್‌ನಿಂದ ಸುಮಾರು 2,500 ಜನ ರೈತರು, ಕಾರ್ಮಿಕರು ಮತ್ತು ಮಹಿಳೆಯರೊಳಗೊಂಡ ಮೆರವಣಿಗೆ ತಮ್ಮ ಬೇಡಿಕೆಗಳಿಗಾಗಿ ಒತ್ತಾಯಿಸುವ ಘೋಷಣೆಗಳೊಂದಿಗೆ ಜಿಲ್ಲಾಧಿಕಾರಿಗಳ ಕಚೇರಿಗೆ ಮುತ್ತಿಗೆ ಹಾಕಿದರು. ಇದರ ನೇತೃತ್ವವನ್ನು ಶಾಸಕ ಹಾಗೂ ಕ. ಪ್ರಾ. ರೈತ ಸಂಘದ ಅಧ್ಯಕ್ಷರಾದ ಕಾ। ಪಿ. ರಾಮಚಂದ್ರರಾವ್, ಸಿ.ಐ.ಟಿ.ಯು. ನ ಅಧ್ಯಕ್ಷರಾದ ಹಾಗೂ ಶಾಸಕರಾದ ಕಾ। ಎಸ್. ಸೂರ್ಯನಾರಾಯಣರಾವ್, ಸಿಐಟಿಯು ಪ್ರಧಾನ ಕಾರ್ಯದರ್ಶಿ ಕಾ। ಸಿ. ನಂಜುಂಡಪ್ಪ, ಸಿಐಟಿಯು ಉಪಾಧ್ಯಕ್ಷರಾದ ಕಾ। ವಿ. ಜೆ. ಕೆ. ನಾಯರ್ ಮತ್ತು ಪಾರ್ಟಿಯ ಹಿರಿಯ ಮುಖಂಡರಾದ ಕಾ। ಎನ್. ಎಲ್. ಉಪಾಧ್ಯಾಯ ಅಲ್ಲದೆ ಪ್ರಾಂತ ರೈತ ಸಂಘದ ಕಾರ್ಯದರ್ಶಿ ಕಾ। ಪಿ. ಜಗನ್ನಾಥ್, ಲಕ್ಷ್ಮಣ್ಣ, ಬೀಡಿ ಕಾರ್ಮಿಕರ ಮುಖಂಡರೂ ಸಿಐಟಿಯು ನ ಉಪಾಧ್ಯಕ್ಷರೂ ಆದ ಕಾ। ಮಹಮ್ಮದ್ ದಸ್ತಗಿರ್ ಮುಂತಾದವರು ವಹಿಸಿದ್ದರು.

ಸುಮಾರು ಒಂದು ಸಾವಿರ ಮಂದಿಯನ್ನು ಪೋಲೀಸರು ಬಂಧಿಸಿ ವ್ಯಾನುಗಳಲ್ಲಿ ತುಂಬಿಕೊಂಡು ಹೋದರು. ಈ ಸಂದರ್ಭದಲ್ಲಿ ವ್ಯಾನಿನ ಮೇಲೆ ಹತ್ತಿ ಕುಳಿತಿದ್ದ ಸಂಗಾತಿಗಳಾದ ರಾಜಣ್ಣ, ಜನಕರಾಜ್, ಕೃಷ್ಣಮೂರ್ತಿ ರಾಮಕೃಷ್ಣ, ಶಿವಶಂಕರ್, ಮೋಹನ್ ಮುಂತಾದವರು ಚಾಲಕನ ಹಾಗೂ ಪೋಲೀಸ್ ಅಧಿಕಾರಿಗಳ ಬೇಜವಾಬ್ದಾರಿ ವರ್ತನೆಯಿಂದಾಗಿ ಸಂಭವಿಸಿದ ಸಣ್ಣ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡಿದ್ದಾರೆ.

ಬಂಧಿತರನ್ನು ಸಂಜೆಯ ಹೊತ್ತಿಗೆ ಬಿಡುಗಡೆ ಮಾಡಲಾಯಿತು. ಆಟೋ ಚಾಲಕರ ಸಂಘ ನೀಡಿದ್ದ ಕರೆಯಿಂದಾಗಿ ಆಟೋಗಳ ಓಡಾಟ ಸ್ತಬ್ಧಗೊಂಡಿತ್ತು.

ಮೈಸೂರು

ಮುನ್ನೂರಕ್ಕೂ ಮಿಕ್ಕಿದ ಕಾರ್ಮಿಕರು ಮತ್ತು ರೈತರು ಮೈಸೂರಿನ ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ

(8ನೇ ಪುಟ ನೋಡಿ)

ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 6 ಸಂಚಿಕೆ 25 ಜೂನ್ 17, 1984 ಬೆಲೆ ಪೈಸೆ. 60

ಸಂಪಾದಕೀಯ

ಜನತಾ ಸರ್ಕಾರ ಇನ್ನಾದರೂ ಕಣ್ಣು ತೆರೆಯಲಿ

ಜೂನ್ 11, 1984 ಒಂದು ಸ್ಮರಣೀಯ ದಿನ. ಕರ್ನಾಟಕ ರಾಜ್ಯದಲ್ಲಿ ರೈತರು ಮತ್ತು ಕಾರ್ಮಿಕರು ಒಟ್ಟಾಗಿ ರಾಜ್ಯದ ಲಕ್ಷಾಂತರ ರೈತ ಕೃಷಿ ಕೂಲಿಗಾರರು 2-3 ದಶಕಗಳಿಂದ ಅಕ್ರಮವಾಗಿ ಸಾಗುವಳಿ ಮಾಡುತ್ತಾ ಬಂದ ಬಂಜರು ಕಾಡು ಭೂಮಿಯನ್ನು ಸಕ್ರಮಗೊಳಿಸಬೇಕೆಂಬ ಮತ್ತು ಲಕ್ಷಾಂತರ ಕಾರ್ಮಿಕರಿಗೆ ಕನಿಷ್ಠ ಕೂಲಿಯನ್ನು ನ್ಯಾಯವಾಗಿ ಕೂಡಲೇ ಜಾರಿಗೊಳಿಸಬೇಕೆಂಬ ಬೇಡಿಕೆಗಳಿಗಾಗಿ ರಾಜ್ಯಾದ್ಯಂತ ಪಿಕೆಟಿಂಗ್ ನಡೆಸಿದ ದಿನ. ಒಂದೇ ದಿನ ಸುಮಾರು 20-22 ಸಾವಿರ ಮಂದಿ ರೈತ-ಕಾರ್ಮಿಕರು ಸರ್ಕಾರಿ ಜಿಲ್ಲಾ ಮತ್ತು ತಾಲ್ಲೂಕು ಕಛೇರಿಗಳನ್ನು ಪಿಕೆಟಿಂಗ್‌ಮಾಡಿ ದಸ್ತಗಿರಿಯಾದ ದಿನ.

ಪಿಕೆಟಿಂಗ್‌ನ ಹಿನ್ನೆಲೆ ಲಕ್ಷಾಂತರ ಕಾರ್ಮಿಕರ ಸಾರ್ವತ್ರಿಕ ಮುಷ್ಕರ - ರೈತ - ಕಾರ್ಮಿಕರ ಜಂಟಿ ಮೆರವಣಿಗೆಗಳು, ಪ್ರದರ್ಶನಗಳು, ರೈತ—ಕಾರ್ಮಿಕರ ಪರವಾದ ಬೇಡಿಕೆಗಳನ್ನು ಕುರಿತ ಘೋಷಣೆಗಳನ್ನು ಕೂಗುತ್ತಾ ಪಿಕೆಟಿಂಗ್ ನಡೆಸಿ ಸಾಮೂಹಿಕವಾಗಿ ದಸ್ತಗಿರಿಯಾಗುವುದು. ರಾಜ್ಯದ ನೂರಾರು ಪ್ರದೇಶಗಳಲ್ಲಿ ಹತ್ತು ಹದಿನೈದು ಜಿಲ್ಲೆಗಳ ಕೇಂದ್ರಗಳಲ್ಲಿ ರೈತ-ಕಾರ್ಮಿಕರು ಪಡೆದ ಅನುಭವ ಬಹಳ ಪ್ರಾಮುಖ್ಯವಾದುದು.

ರಾಜ್ಯದ ಕಾರ್ಮಿಕ ವರ್ಗದ ನೇತೃತ್ವದಲ್ಲಿ ರೈತ ಕೃಷಿ ಕೂಲಿಗಾರರ ಜೀವಂತ ಬೇಡಿಕೆಗೆ ಸಾರ್ವತ್ರಿಕ ಬೆಂಬಲ ಮತ್ತು ಆ ಬೇಡಿಕೆಯನ್ನು ಪಡೆಯುವುದಕ್ಕಾಗಿ ನಡೆದಹೋರಾಟ ಮಹತ್ವಪೂರ್ಣವಾದುದು.

ಜನತಾ ಸರಕಾರವು ಇನ್ನಾದರೂ ಕಣ್ಣು ತೆರೆಯಲಿ ಎಂದಷ್ಟೇ ನಾವು ಈ ಸಂದರ್ಭದಲ್ಲಿ ಹೇಳಲು ಬಯಸುತ್ತೇವೆ. ರಾಮಕೃಷ್ಣ ಹೆಗ್ಡೆಯವರ ಸರಕಾರವು ಕಳೆದ ಒಂದೂವರೆ ವರ್ಷದಿಂದ ಆಡಳಿತ ನಡೆಸುತ್ತಾ ಬರುತ್ತಿರುವುದರಲ್ಲಿ ನಮಗೆ ಸಂತೋಷವಿದೆ. ಕಾಂಗ್ರೆಸ್‌ನ "ಸರಕಾರ ಉರುಳಿಸುವ" ಪಿತೂರಿಯನ್ನು ಸತತವಾಗಿ ಎದುರಿಸಿ ಜ ನ ತಾ ಸರಕಾರ ಮುಂದುವರಿಯುತ್ತಿರುವುದೂ ಕೂಡ ಒಂದು ಸಾಧನೆಯೇ ಸರಿ.

ಆದರೆ ಯಾರದೇ ಸರಕಾರವಾದರೂ ಸರಿ ಅದು ಯಾರಿಗಾಗಿ ಎಂಬ ಪ್ರಶ್ನೆ ಏಳುತ್ತದೆ. ಈ ಜೂನ್ 11 ರಂದು ನಡೆದ ರೈತ—ಕಾರ್ಮಿಕರ ಪ್ರದರ್ಶನದಲ್ಲಿ ಕೂಗಿದ ಘೋಷಣೆಗಳಲ್ಲಿ "ಕಾಂಗ್ರೆಸ್ ನಹಿ ಜನತಾದವರೇ ಯಾರಿಗಾಗಿ ಆಡಳಿತ" ಎಂಬ ಘೋಷಣೆಯೂ ಸೇರಿಕೊಂಡಿತ್ತು.

ಜನತಾ ಸರಕಾರ ರೈತ ಕಾರ್ಮಿಕರಿಗಾಗಿ, ಕೋಟ್ಯಾವಧಿ ಸಂಖ್ಯೆಯಲ್ಲಿರುವ ಜನಸಾಮಾನ್ಯರಿಗಾಗಿ ಎಂದಿದ್ದರೆ ಅದು ಮೊದಲು ರೈತರ, ಕೃಷಿ ಕೂಲಿಕಾರರ ಅಸಂಘಟಿತ ಕಾರ್ಮಿಕರ ಸಮಸ್ಯೆಗಳ ಗಮನಹರಿಸಿ ಪ್ರಾಮಾಣಿಕ ಕ್ರಮಗಳನ್ನು ಕೈಗೊಳ್ಳಬೇಕು.

ನಾವು ಈ ಸಂದರ್ಭದಲ್ಲಿ ಶ್ರೀ ರಾಮಕೃಷ್ಣ ಹೆಗ್ಗಡೆಯವರಿಗೆ ಒಂದು ಎಚ್ಚರಿಕೆಯನ್ನು ಕೊಡಬಯಸುತ್ತೇವೆ. "ನಿಮ್ಮ ಸರಕಾರವು ಐದು ವರ್ಷ ಕಾಲ ಉಳಿಯಬೇಕಾದರೆ ನೀವು ರಾಜ್ಯದ ಗ್ರಾಮಾಂತರ ಪ್ರದೇಶಗಳ ಮತ್ತು ನಗರ ಪ್ರದೇಶಗಳ ಬಡ ವಿಭಾಗಗಳ ಜನರ ವಿಶ್ವಾಸವನ್ನು ಪಡೆದುಕೊಳ್ಳಬೇಕು. ಇಲ್ಲವಾದಲ್ಲಿ ಜನ ನಿಮ್ಮನ್ನು ತಿರಸ್ಕರಿಸುತ್ತಾರೆ" ಎಂಬುದು ಸ್ಪಷ್ಟ.

ಮುಂದಿನ ತಿಂಗಳುಗಳಲ್ಲಿ ರೈತ ಕೂಲಿಕಾರರು, ವಿಶೇಷವಾಗಿ ಕರ್ನಾಟಕ ಪ್ರಾಂತ ರೈತಸಂಘದ ಎಲ್ಲಾ ಘಟಕಗಳೂ ಗ್ರಾಮಾಂತರ ಪ್ರದೇಶಗಳಲ್ಲಿ ತೀವ್ರ ರೀತಿಯ ಪ್ರಚಾರ ಕಾರ್ಯವನ್ನು ನಡೆಸುವ ಸಿದ್ಧತೆಯಲ್ಲಿದ್ದಾರೆ. ಇದಕ್ಕೆ ಇನ್ನೂ ಹೆಚ್ಚಿನ ಸಾರ್ವಜನಿಕ ಬೆಂಬಲ ಸಿಗಲಿದೆ. ಎಂಬುದನ್ನು ಸರ್ಕಾರ ಗಮನಕ್ಕೆ ತೆಗೆದುಕೊಂಡು ಕೂಡಲೇ ಸಮಸ್ಯೆಗಳನ್ನು ಪರಿಶೀಲಿಸಿ ತಕ್ಕ ಕ್ರಮ ಕೈಗೊಳ್ಳಬೇಕು. ಇಲ್ಲವಾದಲ್ಲಿ ನಮ್ಮ ಹೋರಾಟ ಇನ್ನು ಉಗ್ರರೂಪ ತಾಳಲಿದೆ. ಏಕೆಂದರೆ ರಾಜ್ಯದ ರಾಜಕೀಯವನ್ನು ಸಾಮಾನ್ಯ ಜನರ ಹಿತ ಸಾಧಿಸುವ ರಾಜಕೀಯವಾಗಿ ಪರಿವರ್ತನೆಗೊಳಿಸಲು ಇದೊಂದೇ ಸರಿಯಾದ ದಾರಿ.

ರಾಸಾಯನಿಕ ಅಸ್ತ್ರಗಳ ಅಪಾಯ

ರಾಸಾಯನಿಕ ಶಸ್ತ್ರಾಸ್ತ್ರಗಳು ಇತ್ತೀಚೆಗೆ ಮತ್ತೆ ಸುದ್ದಿ ಮಾಡುತ್ತಿವೆ. ಅಣ್ವಸ್ತ್ರಗಳು ಬಳಕೆಗೆ ಬರುವ ಮುಂಚೆ ಈ ರಾಸಾಯನಿಕ ಅಸ್ತ್ರಗಳ ಹೆಸರು ಕೇಳಿದಾಗಲೇ ಜನ ಬೆಚ್ಚಿ ಬೀಳುವಂತಾಗಿದ್ದ ಕಾಲವೊಂದಿತ್ತು. ಈ ಯುದ್ಧಾಸ್ತ್ರಗಳ ಬಳಕೆ ನಿಷಿದ್ಧವೆಂದು ಅಂತರರಾಷ್ಟ್ರೀಯ ಮಟ್ಟದಲ್ಲಿ ಒಪ್ಪಂದವೂ ಆಗಿತ್ತು.

ಯುದ್ಧದಲ್ಲಿ ಬಳಸುವ ಎಲ್ಲ ಅಸ್ತ್ರಗಳಲ್ಲೂ ರಸಾಯನ ದ್ರವ್ಯ ಇದ್ದೇ ಇರುತ್ತದೆ. ಆದರೂ ರಣರಂಗದಲ್ಲಿ ಬಾಂಬುಗಳ ಸಿಡಿತದಿಂದಾಗುವ ಗಾಯಕ್ಕಿಂತ ರಸಾಯನ ದ್ರವ್ಯಗಳ ಸಿಡಿತದಿಂದಾಗುವ ಸುಟ್ಟ ಗಾಯಗಳೇ ಅತ್ಯಂತ ಭೀಕರ.

ಹಿಂದೆಲ್ಲ ಟಿಎನ್‌ಟಿ (ಟ್ರೈನೈಟ್ರೊಟೊಲ್ಯೂನ್) ಎಂಬ ಸ್ಫೋಟಕಗಳ ಬಳಕೆಯಾಗುತ್ತಿತ್ತು. ಇಂಥ ಸ್ಫೋಟಕಗಳಲ್ಲಿ ಬಾಂಬು ಸಿಡಿಯುವ ಮುಂಚೆಯೇ ರಸಾಯನ ದ್ರವ್ಯಗಳು ಉರಿದು, ಅದರ ಒತ್ತಡದಿಂದಾಗಿಯೇ ಯುದ್ಧಾಸ್ತ್ರಗಳ ಸಿಡಿತಕ್ಕೆ ಶಕ್ತಿ ಸಿಗುತ್ತಿತ್ತು. ಆದರೆ ಈಗೀಗ ಬಳಸುವ "ರಾಸಾಯನಿಕ" ಅಥವಾ ಜೀವಾಣು ಬಾಂಬುಗಳ ವಿಷಯ ಹಾಗಲ್ಲ. ಇಲ್ಲಿ ಸಿಡಿತ ಭಯಾನಕವಲ್ಲ. ಆದರೆ ವೈರಿಗಳ ಶರೀರದ ಮೇಲೆ ರಸಾಯನ ದ್ರವ್ಯ ಎರಚಿದ ನಂತರದ ಪರಿಣಾಮ ಮಾತ್ರ ತುಂಬ ಭೀಕರ.

ಯುದ್ಧಗಳಿಗಿದ್ದಷ್ಟೇ ಹಳೆಯ ಇತಿಹಾಸ ರಾಸಾಯನಿಕ ಯುದ್ಧಾಸ್ತ್ರಗಳಿಗೂ ಇದೆ. ಗಂಧಕದಂತೆ ಹೊಗೆ ಮತ್ತು ದುರ್ನಾತ ಸೂಸುವ ಸಂಯುಕ್ತಗಳನ್ನು ಮೊದಲಿನಿಂದಲೂ ಯುದ್ಧಗಳಲ್ಲಿ ಬಳಸಲಾಗುತ್ತಿತ್ತು.

ಆದರೆ ವಿಷಪೂರಿತ ಅನಿಲಗಳನ್ನು ಸಮರದಲ್ಲಿ ಉಪಯೋಗಿಸುವ ತಂತ್ರ ಮಾತ್ರ ಇತ್ತೀಚಿನದು. ಮೊದಲನೇ ವಿಶ್ವಸಮರದ ಕಾಲದಲ್ಲಿ ಕ್ಲೋರಿನ್ ಅನಿಲವನ್ನು ವೈರಿಗಳ ವಿರುದ್ಧ ಪ್ರಯೋಗಿಸಲಾಗುತ್ತಿತ್ತು. ಶರೀರಕ್ಕೆಲ್ಲ ವಿಷ ಸೇಚನವಾಗಿ ಸುಟ್ಟುಕೊಂಡೋ, ಗುಳ್ಳೆ ಬಂದೋ, ಉಸಿರು ಕಟ್ಟಿಯೋ ಯೋಧರು ಸಾಯುತ್ತಿದ್ದರು.

ದಾರುಣ ವಿಷ

ವಿಷಾನಿಲಗಳ ಪೈಕಿ ಸಾಸಿವೆ ಅನಿಲ (ಮಸ್ಟರ್ಡ್ ಗ್ಯಾಸ್) ಎಂಬುದು ಅತ್ಯಂತ ದಾರುಣ ವಿಷ. ಇದು ಅನಿಲವೇನಲ್ಲ. ಅಂಗರಾಮ್ಲ, ಜಲಜನಕ, ಕ್ಲೋರಿನ್‌ಗಳ ಎಣ್ಣೆಯಂಥ ಬಣ್ಣವಿಲ್ಲದ ದ್ರವ. ಕೊಳೆತ ಈ ಸಂಯುಕ್ತಗಳಿಂದಾಗಿ ಸಾಸಿವೆಯ ವಾಸನೆ ಬೀರುವ ಅಸ್ತ್ರ. ಇದನ್ನೆಲ್ಲ ಸೇರಿಸಿ ತಯಾರಿಸಿದ ಬಾಂಬು ಸಿಡಿದಾಗ, ಒಳಗಿನ ಸಂಯುಕ್ತವೆಲ್ಲ ಬಹುದೂರ ಚೆಲ್ಲಾಪಿಲ್ಲಿಯಾಗಿ ಆವಿಯಾಗಿ ಹರಡುತ್ತದೆ. ಈ ಆವಿ ಕನಿಷ್ಠ ಪ್ರಮಾಣದಲ್ಲಿ ಗಾಳಿಯಲ್ಲಿ ಸೇರಿಕೊಂಡಿದ್ದರೂ, ನಮ್ಮ ಉಸಿರಿಗೆ ಸೇರಿ, ಶ್ವಾಸಕೋಶಗಳ ಅಂಗಾಂಶವನ್ನೆಲ್ಲ ಧ್ವಂಸ ಮಾಡುತ್ತದೆ. ಕಣ್ಣುಗಳು ಸೀದು ಹೋಗುವಷ್ಟು, ಚರ್ಮ ಸುಲಿದು ಗುಳ್ಳೆ ಬರುವಷ್ಟು ತೀಕ್ಷ್ಣವಾಗಿರುತ್ತದೆ, ಈ ಆವಿ.

ಇದಕ್ಕಿಂತ ಭೀಕರವಾದದ್ದು ನೈಟ್ರೊಜನ್ ಮಸ್ಟರ್ಡ್ (ಸಾರಜನಕ ಸಾಸಿವೆ). ಇದರಲ್ಲಿ ಅಂಗಾರಾಮ್ಲ ಸಾರಜನಕ, ಜಲಜನಕ ಹಾಗೂ ಕ್ಲೋರಿನ್ ಅನಿಲಗಳ ಸಂಯುಕ್ತವಿದ್ದು, ಮೈಗೆ ಸೋಂಕಿದರೆ ಚರ್ಮದ ಕೆಳಗಿನ ಅಂಗಾಂಶಗಳ ಪ್ರೊಟೀನನ್ನೂ ನಾಶ ಮಾಡುತ್ತದೆ.

ಕಾರ್ಬೊನಿಲ್ ಕ್ಲೋರೈಡ್ (ಫಾಸ್‌ಜೀನ್) ಎಂಬ ನಂಜು ಅನಿಲವಂತೂ, ಬಾಂಬಿನ ಸಿಡಿತವಾದ ಕೆಲವು ಗಂಟೆಗಳ ನಂತರವೇ ತನ್ನ ಕ್ರಿಯೆ ಆರಂಭಿಸಿ, ಶ್ವಾಸಕೋಶವನ್ನು ಕಿತ್ತು ತಿನ್ನುತ್ತದೆ.

ನಾಪಾಮ್ ಬಾಂಬ್

ಆದರೂ ನಾಪಾಮ್ ಬಾಂಬ್‌ಗಳಷ್ಟು ಭೀಕರವಾದದ್ದು ಬೇರೆ ಇಲ್ಲ. ಈ ಬಾಂಬು ಸಿಡಿದಾಗ ಅಂಟಿನ ರೂಪದಲ್ಲಿ ಬೆಂಕಿಯ ಜ್ವಾಲೆ ಪಸರಿಸುತ್ತದೆ. ದೂರ ದೂರದವರೆಗೆ ಎರಚಿ ಹೋಗುವ ಈ ಅಂಟಿನ ಜ್ವಾಲೆ ಒಮ್ಮೆ ಮೈಗೆ ತಾಕಿದರೆ ಸಾಕು, ಅತ್ಯಂತ ತೀಕ್ಷ್ಣ ಉರಿಯಿಂದ ನಿಧಾನವಾಗಿ ಮೈಗೆಲ್ಲ ಹೊತ್ತಿಕೊಂಡು ಸುಡುತ್ತದೆ. ಬಿಳಿ ರಂಜಕವೂ ಇಂಥದ್ದೇ ಪರಿಣಾಮ ಉಂಟು ಮಾಡುತ್ತದೆ. ಆದರೆ ಅದು ಉರಿಯುವಾಗ ದಟ್ಟ ಹೊಗೆಯೂ ಶರೀರದ ಅಂಗಾಂಗಗಳಿಂದ ಹೊರಡುತ್ತ ಕಣ್ಣುಗಳನ್ನು ಕುರುಡಾಗಿಸುತ್ತದೆ. ಸುಡುತ್ತ ಸುಡುತ್ತ ಈ ರಸಾಯನಗಳು ಅಲ್ಲಲ್ಲೇ ಮರುಜ್ವಾಲೆಯನ್ನು ಸಿಡಿಸತೊಡಗಿದುವೆಂದರೆ ಯಾವ ಯೋಧನಿಗೂ ಉಳಿಗಾಲವಿಲ್ಲ.

ಇತ್ತೀಚೆಗೆ "ನರ್ವ್ ಗ್ಯಾಸ್" ಎಂಬ ಇನ್ನೂ ಭಯಾನಕ ರಸಾಯನ ಅಸ್ತ್ರಗಳು ತಯಾರಾಗಿವೆ. ಫಾಸ್ಫೊರಿಕ್ ಆಮ್ಲದಿಂದ ಮಾಡಿದ ಈ ಬಾಂಬುಗಳು ಸಿಡಿದಾಗ ನೇರವಾಗಿ ನಮ್ಮ ನರಮಂಡಲವನ್ನೇ (ಅದೂ ವಿಶೇಷ ಉಸಿರಾಟದ ಅಂಗಾಂಗಗಳನ್ನೇ) ಘಾಸಿ ಮಾಡುತ್ತದೆ.

ಅಶ್ರುವಾಯು

ಅಶ್ರುವಾಯು ಹಾಗೂ "ಅಕ್ಷೀ! ವಾಯು" ಗಳ ಬಗ್ಗೆ ನಮಗೆಲ್ಲ ಗೊತ್ತಿದೆ. ಗಲಭೆ ಪೀಡಿತ ಸ್ಥಳಗಳಲ್ಲಿ ಮಾತ್ರ ಬಳಸುವ ಈ ಅನಿಲಗಳು ಅಷ್ಟೇನೂ ಘಾತುಕಕಾರಿಯಲ್ಲ. "ಅಕ್ಷೀ! ವಾಯು" ಸುಮಾರು ಹನ್ನೆರಡು ತಾಸು ಒಬ್ಬ ವ್ಯಕ್ತಿಯನ್ನು ನಿಶ್ಚೇಷ್ಟಿತಗೊಳಿಸಬಹುದಾದರೂ, ಅದಾದ ಮೇಲೆ ಆ ವ್ಯಕ್ತಿಗೆ ಯಾವುದೇ ದುಷ್ಪರಿಣಾಮ ಉಂಟಾಗಲಾರದು. ಮನುಷ್ಯನ ಶರೀರಕ್ಕೆ ಆಮ್ಲಜನಕ ಪೂರೈಕೆಯನ್ನೇ ಸ್ಥಗಿತಗೊಳಿಸಿ ರಕ್ತಚಲನೆಯನ್ನು ಅಸ್ತವ್ಯಸ್ತಗೊಳಿಸಬಲ್ಲ ವಿಷಾನಿಲಗಳೂ ಈಗ ಬಳಕೆಗೆ ಬರುತ್ತಿವೆ. ಯುದ್ಧರಂಗದಲ್ಲಿ ಇಂಥ ಅಸ್ತ್ರವನ್ನು ಪ್ರಯೋಗಿಸಿದರೆ ಇಡಿ ಸೈನ್ಯವನ್ನೇ ಮೂರ್ಛಾವಸ್ಥೆಗೆ ತರಲು ಸಾಧ್ಯ.

ರಕ್ಷಣೆ

ವಿಷಾನಿಲಗಳ ಶೋಧದ, ಜತೆಗೇ ಅಂಥವುಗಳಿಂದ ರಕ್ಷಣೆ ಪಡೆಯುವ ವ್ಯವಸ್ಥೆಯೂ ಬಳಕೆಗೆ ಬರುತ್ತದೆ. ಯುದ್ಧದಲ್ಲಿ ರಾಸಾಯನಿಕ ಅಸ್ತ್ರಗಳ ಪ್ರಯೋಗವಾಗುವ ಸಂಭವ ಇದ್ದಾಗೆಲ್ಲ ಸೈನಿಕರಿಗೆ ಮುಖವಾಡಗಳನ್ನು ಒದಗಿಸಲಾಗುತ್ತದೆ. ಈ ಮುಖವಾಡಗಳಲ್ಲಿ ವಿಷಾನಿಲವನ್ನು ನಿರೋಧಿಸಬಲ್ಲ ಸೋಡಾ ಸುಣ್ಣ ಹಾಗೂ ಇದ್ದಲಿಪುಡಿ ಸಂಗ್ರಹವಿರುತ್ತದೆ. ಇದ್ದಲಿಪುಡಿ, ವಿಷಾನಿಲವನ್ನು ಮೂಗಿನೊಳಕ್ಕೆ ಹೋಗದಂತೆ ತಡೆ ಹಿಡಿದು ಸಂಗ್ರಹಿಸಿಕೊಳ್ಳುತ್ತದೆ. ಇದ್ದಲಿಪುಡಿಯನ್ನು ದಾಟಿ ಬರಬಲ್ಲ ಎಂಥ ನಂಜಿನ ಅನಿಲವನ್ನಾದರೂ ಸೋಡಾ ಸುಣ್ಣ ತಟಸ್ಥಗೊಳಿಸುತ್ತದೆ.

ವಿಷಾನಿಲಗಳನ್ನು ಕೇವಲ ಸೈನಿಕರ ಹತ್ಯೆಗಷ್ಟೇ ಪ್ರಯೋಗಿಸಲಾಗುತ್ತಿಲ್ಲ. ವೈರಿ ನೆಲೆಯಲ್ಲಿರುವ ವೃಕ್ಷಗಳ ಹಾಗೂ ಪೈರುಗಳ ಹಸಿರನ್ನೆಲ್ಲ ಸುಟ್ಟು ಹಾಕಲೂ ಇವನ್ನು ಬಳಸಬಹುದು.

ಬಳುವಳಿ

ರಾಸಾಯನಿಕ ಅಸ್ತ್ರಗಳ ಇನ್ನೊಂದು ರೂಪವೇ ಜೀವಾಣು ಅಸ್ತ್ರ. ಇದು ಮೈ ಸುಡುವುದಿಲ್ಲವಾದರೂ ವೈರಿ ನೆಲೆಯಲ್ಲಿ ದಾರುಣ ಬೇನೆಗಳನ್ನು ಹಬ್ಬಿಸಬಲ್ಲದು. ವೈರಿ ದೇಶಗಳಲ್ಲಿ ವಿಷಾಣುಗಳನ್ನೂ ಬ್ಯಾಕ್ಟೀರಿಯವನ್ನೂ ಸಿಂಪಡಿಸಿ, ಸಾಂಕ್ರಾಮಿಕ ರೋಗಗಳ ಪಿಡುಗನ್ನೇ ಹರಡಿಸಿ ಕೋಲಾಹಲವನ್ನುಂಟು ಮಾಡಬಲ್ಲದು.

ರಾಸಾಯನಿಕ ಶಸ್ತ್ರಾಸ್ತ್ರ, ಜೀವಾಣು ಅಸ್ತ್ರಗಳ ನಂತರವೇ ಬಂದ ಕೀಟನಾಶಕಗಳನ್ನು ಯುದ್ಧಾಸ್ತ್ರ ಶೋಧದ ಬಳುವಳಿಯೆಂದೇ ಕರೆಯಬಹುದು. ಮುಂದೆಂದಾದರೂ ಒಂದು ದಿನ ಈ ಕೀಟಾಣುಗಳಿಗೆ ಬುದ್ಧಿಶಕ್ತಿ ಬಂದರೆ ಅವು ತಮ್ಮ ಶಕ್ತಿಯನು ಜಗತ್ತಿನ ಅತ್ಯಂತ ಕ್ರೂರ ಕೀಟವಾದ ಮನುಷ್ಯನ ವಿರುದ್ಧವೇ ಬಳಸಬಹುದು!

—ಡಾ॥ ವಿ. ಎಸ್. ವೆಂಕಟವರದ

ಕೃಪೆ : ಪ್ರಜಾವಾಣಿ
9-5-1984

ಕ್ರಾಂತಿರಂಗದಲ್ಲಿ ಬಂಡಾಯ

ಹೋದ ವರ್ಷ ನಮ್ಮ ರಾಜ್ಯದಲ್ಲಿ ನಡೆದ ವಿಧಾನ ಸಭಾ ಚುನಾವಣೆಯಲ್ಲಿ ಬಂಗಾರಪ್ಪನವರು ಸಿ.ಪಿ.ಐ., ಜನತಾ ಸಿಪಿಐ[ಎಂ] ಪಕ್ಷಗಳ ಜೊತೆ ಸೇರಿಕೊಂಡು ಕಾಂಗ್ರೆಸ್ ಪಕ್ಷವನ್ನು, ಅದರ ಜೊತೆಯಲ್ಲಿ ಸರ್ವಾಧಿಕಾರಿ ಶಕ್ತಿಯನ್ನು ಕರ್ನಾಟಕದಲ್ಲಿ ಸೋಲಿಸುವ ಮಹಾ ಕಾರ್ಯದಲ್ಲಿ ಪಾಲ್ಗೊಂಡು ಜನರಿಂದ ಬೆನ್ನು ಚಪ್ಪರಿಸಿಕೊಂಡಿದ್ದರು. ಮುಖ್ಯಮಂತ್ರಿಯಾಗುವುದೇ ತನ್ನ ಗುರಿ ಎಂಬ ತನ್ನ ಅಂತರಾಳದಲ್ಲಿ ಅಡಗಿಕೊಂಡಿದ್ದ ಮಹದಾಸೆಯನ್ನು ಹೊರಗೆಡವಿ ಕರ್ನಾಟಕದಲ್ಲಿ ಪ್ರಥಮ ಬಾರಿ ಕಾಂಗ್ರೆಸ್ ವಿರೋಧಿ ಸರಕಾರದ ರಚನೆಯನ್ನು ಸ್ವಾಗತಿಸದೆ, ಅದನ್ನು ವಿರೋಧಿಸಿ ಜನರ ಅಸಮಾಧಾನಕ್ಕೆ ತುತ್ತಾದರು. ಇಂದಿರಾಗಾಂಧಿ ಇದರ ಲಾಭ ಪಡೆಯಲು ಪ್ರಯತ್ನ ಮಾಡಿದಾಗ ಅವರ ಬಲೆಗೆ ಬಿದ್ದು, ರಾಜ್ಯದಲ್ಲಿ ಕಾಂಗ್ರೆಸ್ ಮತ್ತಿನ್ನಿತರ ಛಿದ್ರಕಾರಿ ಶಕ್ತಿಗಳ ಜೊತೆ ಸೇರಿ ಜನತಾ ಸರಕಾರವನ್ನು ಉರುಳಿಸುವ ಕುತಂತ್ರದಲ್ಲಿ ಪಾಲುಗಾರರಾದರು.

ಬಂಡವಾಳಶಾಹಿ ಪಕ್ಷಗಳಲ್ಲಿ ಧ್ಯೇಯ ನಿಷ್ಠೆ, ಶಿಸ್ತುಗಳಿಗೆ ಪ್ರಾಧಾನ್ಯತೆಯಿಲ್ಲ. ಅಧಿಕಾರ, ಜಾತಿ, ಧರ್ಮಗಳ ಹೆಸರಲ್ಲಿ ಅವು ಬದುಕಿ ಉಳಿದಿವೆ. ಇಂದಿರಾ ಗಾಂಧಿಯಂತೆ ತಾನು ರಾಜ್ಯದ ರಾಜಕೀಯದಲ್ಲಿ ಕೇಂದ್ರಬಿಂದುವಾಗಿ ಬೆಳೆದು ಬರಬೇಕೆಂಬ ಕನಸು ಕಂಡಿದ್ದರು. ಬಂಗಾರಪ್ಪನವರು. ಆದರೆ ಅವರ ಸ್ವಾರ್ಥ ಲಾಲಸೆ ಸಂಕುಚಿತ ಭಾವನೆ ಬೆಳವಣಿಗೆಗೆ ಮಾರಕವಾಗುತ್ತದೆ.

ಪಕ್ಷದ ಉಪಾಧ್ಯಕ್ಷ ವೆಂಕಟೇಶ ಮತ್ತು ಪ್ರಧಾನ ಕಾರ್ಯದರ್ಶಿ ನವನೀತಂ ಬಂಗಾರಪ್ಪನವರ ಧುರೀಣತ್ವವನ್ನೇ ಅಲ್ಲಗಳೆದು, ಅವರು ಕಾಂಗ್ರೆಸ್ಸಿನಲ್ಲಿ ವಿಲೀನಗೊಳ್ಳುವ ಹೊಂಚಿನಲ್ಲಿದ್ದಾರೆಂಬ ಆರೋಪ ಹೊರಿಸಿದ್ದಾರೆ.

ಇತ್ತೀಚೆಗೆ ದೇಶದ ರಾಜಕೀಯ ರಂಗದಲ್ಲಿ ಬಹಳಷ್ಟು ಆಶಾದಾಯಕ ಬದಲಾವಣೆ ಕಾಣುತ್ತಿದ್ದೇವೆ. ಇಂದಿರಾಗಾಂಧಿಯ ಜನವಿರೋಧಿ ನೀತಿ, ಕಾಂಗ್ರೆಸ್ ವಿರೋಧಿ ಸರಕಾರಗಳನ್ನುರುಳಿಸುವ ಪ್ರಯತ್ನ, ಸಂವಿಧಾನವನ್ನೇ ಬದಲಾಯಿಸುವ ಪ್ರಯತ್ನಗಳಿಂದಾಗಿ, ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನೆಲ್ಲ ಕನಿಷ್ಠ ಕಾರ್ಯಕ್ರಮಗಳ ತಳಹದಿಯಲ್ಲಿ ಒಂದೆಡೆ ಸೇರಿಸಿ ಐಕ್ಯ ಕಾರ್ಯಾಚರಣೆಗಿಳಿಸುವ ಪ್ರಯತ್ನದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಯಶಸ್ವಿಯಾಗುತ್ತಿರುವುದು ಶುಭ ಚಿನ್ಹೆಯಾಗಿದೆ. ಹದಗೆಡುತ್ತಿರುವ ದೇಶದ ರಾಜಕೀಯದ ಮೇಲೆ ಇದು ಒಳ್ಳೆ ಪರಿಣಾಮ ಬೀರುತ್ತಿದೆ. ಸಂಯುಕ್ತ ಚಳುವಳಿಯ ಮಹತ್ವವನ್ನು ಮನದಟ್ಟು ಮಾಡಿಕೊಡುತ್ತಿದೆ.

ಕರ್ನಾಟಕದ ರಾಜಕೀಯದ ಮೇಲೂ ಇದರ ಪರಿಣಾಮ ಬೀರುತ್ತಿವೆ ಕ್ರಾಂತಿರಂಗದಲ್ಲಿಯ ಒಡಕು ರಾಜ್ಯದಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಬೆಳವಣಿಗೆಗೆ ಸಹಾಯಕವಾಗಲೆಂದು ಹಾರೈಸುತ್ತೇವೆ. ಹಾಗಾಗಬೇಕಾದರೆ ಸಿ. ಪಿ. ಐ. [ಎಂ] ತನ್ನ ಸಾಮೂಹಿಕ ಚಟುವಟಿಕೆಗಳನ್ನು ತೀವ್ರಗೊಳಿಸಬೇಕು. ಸಿ. ಪಿ. ಐ. ಮತ್ತು ಇತರ ಪ್ರಜಾಪ್ರಭುತ್ವ ಶಕ್ತಿಗಳ ಜೊತೆಯಲ್ಲಿ ವಿರೋಧಿ ಪಕ್ಷಗಳ ದಿಲ್ಲಿ ಸಮಾವೇಶದ ನಿರ್ಣಯಗಳನ್ನು ಕಾರ್ಮಿಕ ಸಂಘಗಳ ರಾಷ್ಟ್ರೀಯ ಹೋರಾಟ ಸಮಿತಿಯ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಲು ಸರ್ವರೀತಿಯ ಪ್ರಯತ್ನ ಮಾಡಬೇಕು. ಹೋರಾಟದ ಮೂಲಕ ಜನರಲ್ಲಿರುವ ಭ್ರಮೆ ನಿರಸನ ಮಾಡಿ ಅವರಲ್ಲಿ ರಾಜಕೀಯ ಜಾಗೃತಿ ಉಂಟಾದರೆ ಮಾತ್ರ ಹೊಸ ಪರಿವರ್ತನೆಯನ್ನುಂಟು ಮಾಡಲು ಸಾಧ್ಯ. ಆದಿಸೆಯಲ್ಲಿ ಮುಖ್ಯವಾಗಿ ಸಿ. ಪಿ. ಐ. [ಎಂ] ಹಾಗೆಯೇ ಸಿ. ಪಿ. ಐ. ಹೆಚ್ಚಿನ ಪ್ರಯತ್ನ ಮುಂದುವರಿಸುವುದು ಅಗತ್ಯ.

ಮರು ಪರೀಕ್ಷೆಗೆ ಎಸ್.ಎಫ್.ಐ. ಒತ್ತಾಯ

ಬೆಂಗಳೂರು ವಿಶ್ವವಿದ್ಯಾನಿಲಯ ವ್ಯಾಪ್ತಿಯ ಕೆಲವು ಪರೀಕ್ಷಾ ಕೇಂದ್ರಗಳಲ್ಲಿ ಕಳೆದ ವಾರ್ಷಿಕ ಪರೀಕ್ಷೆಯಲ್ಲಿ "ಸಾಮೂಹಿಕ ಕಾಪಿ" ಮಾಡಿದ ಮತ್ತು ಪರಿಕ್ಷಾ ಕಾರ್ಯದಲ್ಲಿ ನಿರತರಾಗಿದ್ದ ಅಧ್ಯಾಪಕರ ಮೇಲೆ ಧಾಳಿ ನಡೆಸಿದ ಪ್ರಕರಣಗಳ ಬಗ್ಗೆ ಭಾರತ ವಿದ್ಯಾರ್ಥಿ ಫೆಡರೇಷನ್ [ಎಸ್. ಎಫ್. ಐ] ಕರ್ನಾಟಕ ರಾಜ್ಯ ಸಮಿತಿಯು ತನ್ನ ತೀವ್ರ ವಿಷಾದ ವ್ಯಕ್ತಪಡಿಸುತ್ತದೆ.

ಇದೇ ಕಾರಣದಿಂದ ಈಗ ಅಧ್ಯಾಪಕರು ಮೌಲ್ಯಮಾಪನ ಕಾರ್ಯ ಬಹಿಷ್ಕರಿಸಿರುವುದರಿಂದ ವಿದ್ಯಾರ್ಥಿ ಸಮುದಾಯ ತೊಂದರೆಗೀಡಾಗಿದೆ. ಆದ್ದರಿಂದ ವಾಸ್ತವಾಂಶಗಳ ಪರಿಶೀಲನೆಯ ನಂತರ ಸಾಮೂಹಿಕ ಕಾಪಿ ನಡೆದಿರುವ ಕೇಂದ್ರಗಳಲ್ಲಿ ಕೂಡಲೇ ಮರು ಪರೀಕ್ಷೆಗಳನ್ನು ನಡೆಸಿ ಮೌಲ್ಯಮಾಪನ ಕಾರ್ಯವನ್ನು ಮುಂದುವರಿಸಲು ಬೆಂಗಳೂರು ವಿ.ವಿ ಅಧ್ಯಾಪಕರ ಸಂಘದೊಡನೆ ಮಾತುಕತೆ ನಡೆಸಬೇಕೆಂದು ಒತ್ತಾಯಿಸುತ್ತದೆ.

ಮುಸುಕಿನ ಮರೆಯಲ್ಲಿ ಜೀವಂತವಿರುವ ಡಾಂಗೇ ವಾದ

ಲೇಖಕರು : ವಿ. ಜೆ. ಕೆ. ನಾಯರ್

ಅನು : ಜಿ. ಎನ್. ನಾಗರಾಜ್

[ಡಾಂಗೆಯವನ್ನು ಬಿಟ್ಟರೂ ಡಾಂಗೆ ವಾದವನ್ನು ಅಪ್ಪಿಕೊಂಡಿರುವ ಅನೇಕ ಕಮ್ಯುನಿಸ್ಟರು ನಮ್ಮ ಮಧ್ಯದಲ್ಲಿದ್ದಾರೆ. ಮತ್ತು ಈ ವಾದವನ್ನು ಮುಂದುವರಿಸುತ್ತಲೇ ಇದ್ದಾರೆ. ಇದು ಮಾರ್ಚ್ 22 ರಂದು ಎ. ಕೆ. ಜಿ. ಯವರ ಮರಣ ವಾರ್ಷಿಕದ ದಿನ ಎ. ಕೆ. ಜಿ. ಸ್ಮಾರಕ ಗ್ರಂಥಾಲಯದವರು ಬೆಂಗಳೂರಿನಲ್ಲಿ ಏರ್ಪಡಿಸಿದ್ದ "ಎ.ಕೆ.ಜಿ. ಮತ್ತು ಎಡ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯತೆ" ಎಂಬ ವಿಚಾರ ಸಂಕಿರಣದಲ್ಲಿ ಬೆಳಕಿಗೆ ಬಂತು. ಅಂದು ಮಾತನಾಡಿದ ಡಾ. ಜಿ. ರಾಮಕೃಷ್ಣರವರ ಮುಸುಕಿನ ಮರೆಯ ಡಾಂಗೆ ವಾದವನ್ನು ಬಯಲಿಗೆಳೆಯುವುದೇ ಈ ಲೇಖನದ ಉದ್ದೇಶ.]

ಸಮಾಜವಾದೀ ಸಮಾಜದಲ್ಲಿ ಮಾತ್ರವೇ ಪ್ರಜಾಪ್ರಭುತ್ವ ಸಾಧ್ಯ, ಧರ್ಮಾಂಧತೆ, ಮತಾಂಧತೆಗೆ ವಿರುದ್ಧವಾದ ಜಾತ್ಯಾತೀತ ನೀತಿಯಿಂದ ಮಾತ್ರ ಪ್ರಜಾಪ್ರಭುತ್ವ ಸಾಧ್ಯ, 1977ರಲ್ಲಿ ಸ್ಥಾಪಿತವಾದ ಸರ್ಕಾರದಲ್ಲಿ ಹೀಗೆ ಧರ್ಮಾಂಧರು ಸೇರಿಕೊಂಡಿದ್ದರಿಂದಲೇ ಅವರು ಚಾರಿತ್ರಿಕ ಸತ್ಯಗಳನ್ನು ಮುಚ್ಚಿಹಾಕಲು ಪ್ರಯತ್ನಿಸಿದ್ದು, ಕೆಲವರು ಎಂದರೆ ಸಿ. ಪಿ. ಐ (ಎಂ) ಮತ್ತು ಇತರ ಮಿತ್ರ ಪಕ್ಷಗಳು ಎಂಬ ಅರ್ಥದಲ್ಲಿ-ನಮ್ಮ ದೇಶದ ಸಮಸ್ಯೆಗಳಿಗೆ ಸಾಮಾಜಿಕ—ಆರ್ಥಿಕ ಕಾರಣಗಳನ್ನು ಗುರುತಿಸದೆ ಒಬ್ಬ ವ್ಯಕ್ತಿಯ (ಶ್ರೀಮತಿ ಇಂದಿರಾಗಾಂಧಿ ಎಂಬ ಅರ್ಥದಲ್ಲಿ) ಮೇಲೆ ತಮ್ಮ ಎಲ್ಲಾ ಕೋಪವನ್ನು ಕಾರುತ್ತಾರೆ. ಹೀಗೇ ಅವರ ವಾದ ಸಾಗಿತ್ತು.

ಇಂತಹ ವಾದದಲ್ಲಡಗಿರುವುದೇನು ?"

ಸಮಾಜವಾದಕ್ಕೆ ಬದ್ಧರಾಗಿರುವವರಿಂದಲೇ ಎಡ ಮತ್ತು ಪ್ರಜಾಸತ್ತಾತ್ಮಕ ಐಕ್ಯರಂಗವನ್ನು ಕಟ್ಟಬೇಕು. ಯಾವುದೇ ಪಕ್ಷ ಅಥವಾ ವ್ಯಕ್ತಿ ಎಡ ಮತ್ತು ಪ್ರಜಾಪ್ರಭುತ್ವ ರಂಗಕ್ಕೆ ಸೇರಬೇಕಾದರೆ, ಧರ್ಮಾಂಧತೆಗೆ ವಿರೋಧವೆಂಬುದು ಪಾಲಿಸಬೇಕಾದ ಪೂರ್ವಭಾವೀ ಷರತ್ತು, ಸಿ. ಪಿ. ಐ. (ಎಂ) ಮತ್ತು ಇತರ ಮಿತ್ರ ಪಕ್ಷಗಳು ಯಾವುದೇ ಕಾರಣವಿಲ್ಲದೇ ಇಂದಿರಾ ವಿರೋಧಿಗಳಾಗಿದ್ದಾರೆ ಎಂಬುದು ಈ ವಾದದ ಅರ್ಥ.

ಆದರೇನು ಮಾಡುವುದು ? ಭಾರತ ಕಮ್ಯುನಿಸ್ಟ್ ಪಕ್ಷ, ಕಳೆದ ಐದು ವರ್ಷಗಳಿಂದ ಎಲ್ಲ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಜೊತೆಯಲ್ಲಿ ಸಹಕರಿಸುತ್ತಿರುವುದರಿಂದ ಅವರು ತಮ್ಮ ವಾದವನ್ನು ಭಾರೀ ಸೂಕ್ಷ್ಮವಾದ ರೀತಿಯಲ್ಲಿ ಮಂಡಿಸಬೇಕಾಯಿತು. ತಮ್ಮ ಮನಸ್ಸನ್ನು ಸುತ್ತಿ ಬಳಸಿಯಾದರೂ ಸರಿ ಅಲ್ಲಿ ಅದನ್ನು ತಿಳಿದುಕೊಳ್ಳಬಲ್ಲವರ ಮುಂದೆ ಬಿಚ್ಚಿದ್ದೇನೆ-ಎಂಬ ತೃಪ್ತಿಯಷ್ಟೇ ಅವರಿಗ್ಗಲಭಿಸಿದ್ದು. ನೇರವಾಗಿ ಹೇಳಲಾಗದ ಅನಿವಾರ್ಯತೆಯಿದ್ದುದರಿಂದ ತಮ್ಮ ಗುರಿ ಸಾಧಿಸಲಾಗಲಿಲ್ಲ. ಮತ್ತು ಇದು ಕೇಳುಗರಿಂದ ತೀವ್ರ ಪ್ರತಿಕ್ರಿಯೆಗೆ ಒಳಗಾಗಬೇಕಾದ ಸಂದರ್ಭವನ್ನು ತಪ್ಪಿಸಿತು. ಆದರೆ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯತೆಯ ಬೆಳವಣಿಗೆಯ ದೃಷ್ಟಿಯಿಂದ ಈ ವಾದಕ್ಕೆ ಉತ್ತರ ಕೊಡಲೇ ಬೇಕಾಗಿದೆ.

ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷ ಶ್ರೀಮತಿ ಇಂದಿರಾ ಗಾಂಧಿಯವರನ್ನು ಕುರುಡು ಕುರುಡಾಗಿ ವಿರೋಧಿಸುತ್ತಿಲ್ಲ ಎಂಬುದನ್ನು ಇವರು ಅರ್ಥಮಾಡಿಕೊಂಡಿಲ್ಲ, ಇಲ್ಲವೇ ಮುಚ್ಚಿಡಬಯಸುತ್ತಾರೆ. ನಮ್ಮ ಪಕ್ಷ, ಇಂದಿರಾ ಗಾಂಧಿಯವರ ಧಾಳಿಯನ್ನು 1960ರ ಕೇರಳದ ವಿಮೋಚನಾ ಚಳುವಳಿಯ ದಿನಗಳಿಂದ ಹಿಡಿದು ಪಶ್ಚಿಮ ಬಂಗಾಳದಲ್ಲಿ ಪ್ರಜಾಪ್ರಭುತ್ವದ ಹತ್ಯೆಯವರೆವಿಗೂ, ಅರೆಫ್ಯಾಸಿಸ್ಟ್ ಭಯೋತ್ಪಾದಕ ನೀತಿಯವರೆವಿಗೂ ಎದುರಿಸುತ್ತಾ ಬಂದಿದೆ. ಇಷ್ಟಾದರೂ ನಾವು ಆಕೆಯ ಎಲ್ಲಾ ನೀತಿಯನ್ನು ವಿರೋಧಿಸಿಲ್ಲ.

ಬ್ಯಾಂಕ್ ರಾಷ್ಟ್ರೀಕರಣಕ್ಕೆ. ರಾಷ್ಟ್ರ ಸ್ಥಾನಕ್ಕೆ ಗಿರಿಯವರ ಉಮೇದುವಾರಿಕೆಗೆ, ಬಾಂಗ್ಲಾದೇಶದ ವಿಮೋಚನೆಯೊದಲಾದವಕ್ಕೆ ನಾವು ನೀಡಿದ ಬೆಂಬಲವನ್ನು ಇಂದಿರಾ ವಿರೋಧಿನೀತಿ ಎಂದು ಇವರು ಪರಿಗಣಿಸುತ್ತಾರೆಯೇ ? ನಿಜ, ನಾವು ಕಣ್ಣುಮುಚ್ಚಿ ಬೆಂಬಲವನ್ನು ನೀಡಿಲ್ಲ. ಆಯಾ ಪ್ರಸಂಗದ ಔಚಿತ್ಯಕ್ಕೆ ಅನುಗುಣವಾಗಿ ನಮ್ಮ ಬೆಂಬಲವನ್ನು ಸಾರಿದ್ದೇವೆ. ನಮ್ಮ ಪಕ್ಷದ ವಿಜಯವಾಡಾ ಅಧಿವೇಶನ ಇಂದಿರಾ ಸರ್ಕಾರದ ವಿದೇಶ ನೀತಿಯ ಅನೇಕ ಅಂಶಗಳಲ್ಲಿ ಸರಿಯಾದ ನೀತಿಯನ್ನು ಅನುಸರಿಸುತ್ತದೆಂದು ಗುರುತಿಸಿದೆ. ದೇಶ ವಿಭಜಕ ಶಕ್ತಿಗಳ ಪಾತ್ರವನ್ನು ಗುರುತಿಸುವುದರಲ್ಲಿ ಕೂಡಾ ನಾವೇನು ಹಿಂದೆ ಬಿದ್ದಿಲ್ಲ. ಆದರೆ ನಮ್ಮ ಟೀಕಾಕಾರರಿಗೆ ಈ ರೀತಿಯ ಬೆಂಬಲ ನೀಡುವುದು ಸಾಲದು. ಆಕೆಯನ್ನು ಎಡ ಮತ್ತು ಪ್ರಜಾಸತ್ತಾತ್ಮಕ ರಂಗದ ಭಾಗವಾಗಿ ಪರಿಗಣಿಸಬೇಕು ಎಂದು ಅವರ ಅಭಿಪ್ರಾಯ.

ಬಿ. ಜೆ. ಪಿ. ಯಂತಹ ಪಕ್ಷಗಳು ನಮ್ಮ ಮೇಲೆ ಗೂಬೆ ಕೂರಿಸುವ ಯತ್ನ ಮಾಡುತ್ತಿರುವುದೂ ಇದೇ ವಿಷಯದಲ್ಲಿಯೇ. ಇಂದಿರಾಗಾಂಧಿಯ ವಿದೇಶ ನೀತಿಗೆ ಕಮ್ಯುನಿಸ್ಟರು ಬೆಂಬಲ ನೀಡುವುದು ಕೊನೆಗೆ ಅವಳನ್ನು ಪೂರ್ಣವಾಗಿ ಬೆಂಬಲಿಸುವ ಮಟ್ಟಿಗೆ ಕೊಂಡೊಯ್ಯುತ್ತದೆ. ಅಲ್ಲದೆ ಸೋವಿಯತ್, ದೇಶದ ಒತ್ತಡದಿಂದ ಹೀಗೆ ಮಾಡುತ್ತಾರೆ ಎಂದು ಮನೆ ಛಾವಣಿಯೇರಿ ಕಿರುಚುತ್ತಿದ್ದಾರೆ. ಇಂದಿರಾ ಗಾಂಧಿ ಪ್ರಗತಿ ಪರ ರಾಷ್ಟ್ರೀಯ ಬಂಡವಾಳ ಶಾಹಿಯ ನಾಯಕಿಯಾದ್ದರಿಂದಲೇ ಆಕೆ ಸರಿಯಾದ ವಿದೇಶ ನೀತಿಯನ್ನನುಸರಿಸುತ್ತಿರುವುದು. ಆದುದರಿಂದ ನಾವು ಅವಳನ್ನು ಪೂರ್ಣವಾಗಿ ಬೆಂಬಲಿಸಬೇಕು ಎಂದು ಕೂಡ ನಮ್ಮ ಟೀಕಾಕಾರರು ವಾದಿಸಬಹುದು.

ಮಾರ್ಕ್ಸ್‌ವಾದೀ ಕಮ್ಯೂನಿಸ್ಟ್ ಪಕ್ಷ, ಆಳುವ ವರ್ಗದ ವರ್ಗಧೋರಣೆಗಳನ್ನು, ಜಿ. ರಾಮಕೃಷ್ಣ ಮತ್ತು ಅವರ ಸ್ನೇಹಿತರು ಹೇಳುವ ಹಾಗೆ ಪ್ರಗತಿಪರ ಎಂದು ಕರೆಯಲು ಸಾಧ್ಯವಿಲ್ಲ. ನಾವು ಆಳುವ ವರ್ಗವನ್ನು ವಿದೇಶಿ ಬಂಡವಾಳಶಾಹಿಗಳೊಡನೆ ಸಹಕರಿಸುತ್ತಿರುವ ಗುತ್ತೇದಾರಿ ಬಂಡವಾಳಶಾಹಿ ನಾಯಕತ್ವದ ಭೂಮಾಲೀಕ ಬಂಡವಾಳಶಾಹಿ ಸಾಹಚರ್ಯವೆಂದು ಗುರುತಿಸುತ್ತೇವೆ. ಈ ಆಳುವ ವರ್ಗಗಳು, ಶೋಷಕ ವರ್ಗಗಳಾದ್ದರಿಂದ, ಅನೇಕ ಎಳೆತ ಸೆಳೆತಗಳಿಗೆ ಒಳಗಾಗುತ್ತವೆ. ತಮ್ಮ ತಮ್ಮೊಳಗಿನ ವೈರುಧ್ಯಗಳಿಗೆ ತುತ್ತಾಗುತ್ತವೆ. ಸಾಮ್ರಾಜ್ಯಶಾಹಿ ಮತ್ತು ತಮ್ಮ ಹಿತಾಸಕ್ತಿಗಳ ನಡುವೆ ಘರ್ಷಣೆ ಬಂದಾಗ, ನಮ್ಮ ಆಳುವ ವರ್ಗಗಳು, ಸರಿಯಾದ ವಿದೇಶ ನೀತಿಯನ್ನು ಅನುಸರಿಸುತ್ತವೆ. ತಮ್ಮ ಸ್ವಂತ ಹಿತಾಸಕ್ತಿಗಳಿಗಾಗಿ ಉತ್ಪಾದನಾ ಸಾಧನಗಳ ಕೇಂದ್ರೀಕರಣಕ್ಕೆ, ರಾಷ್ಟ್ರೀಕರಣಕ್ಕೆ ಕೈಹಾಕುತ್ತಾರೆ. ಆದರೆ ಇವೆಲ್ಲಾ ರಾಷ್ಟ್ರೀಯ ಬಂಡವಾಳಶಾಹಿಯ ಪ್ರಗತಿಪರ ಕ್ರಮಗಳೆಂದು ಪರಿಗಣಿಸಲಾಗುವುದಿಲ್ಲ. ನಮ್ಮ ಶೋಷಕ ವರ್ಗ, ತಮ್ಮ ಖಜಾನೆ ಭರ್ತಿ ಮಾಡಿಕೊಳ್ಳಲು ಮಾಡುವ ಕೆಲಸ. ಈ ಖಜಾನೆ ಭರ್ತಿ ಕೆಲಸದಲ್ಲಿ ಬಹಳ ಪಾಲು ದೇಶದ ಆಂತರಿಕ ನೀತಿಯಲ್ಲಿ ಅನುಸರಿಸುತ್ತಿರುವ ಬಂಡವಾಳಶಾಹಿ ಅಭಿವೃದ್ಧಿ ಪಥದಿಂದ ಅಂದರೆ ಸಾಮಾನ್ಯ ಜನತೆಯನ್ನು ಸುಲಿಯುವುದರಿಂದ ಶೇಖರವಾಗುತ್ತಿದೆ.

ಅಲಿಪ್ತ ಚಳುವಳಿಯ ನಾಯಕತ್ವದಲ್ಲಿ ಮತ್ತು ಸೋವಿಯತ್ ದೇಶದೊಡನೆ ಸ್ನೇಹಸಂಬಂಧದಲ್ಲಿ ವ್ಯಕ್ತವಾಗುವ ವಿದೇಶ ನೀತಿಯನ್ನು ನಾವು ಬೆಂಬಲಿಸಲೇಬೇಕು. ಆದರೆ ಅದೇ ಸಮಯದಲ್ಲಿ ಐ.ಎಂ.ಎಫ್., ವಿಶ್ವ ಬ್ಯಾಂಕ್ ಸಾಲದ ಮೇಲೆ ಅವಲಂಬನೆ, ಮತ್ತು ಅವುಗಳ ಸಹಭಾಗಿಯಾಗುವ ಧೋರಣೆಯನ್ನೂ ವಿರೋಧಿಸಲೇಬೇಕು. ನಮಗೆ ಅಂತರ ರಾಷ್ಟ್ರೀಯವಾಗಿ ಈ ವಿದೇಶ ಧೋರಣೆ ಸಹಾಯಕ ಎಂದ ಮಾತ್ರಕ್ಕೆ ಆಳುವ ವರ್ಗದ ಬಾಲಬಡುಕರಾಗಲು ಸಾಧ್ಯವಿಲ್ಲ.

ನಮ್ಮ ದೇಶ ಸರ್ವಾಧಿಕಾರತ್ವದ ಕಡೆಗೆ ವಾಲುವುದನ್ನು, ಇಂದಿರಾ ಗಾಂಧಿ ಎಂಬ ಒಬ್ಬ ವ್ಯಕ್ತಿಯ ಅಥವಾ ಅವಳ ಅನುವಂಶಿಕ ಆಡಳಿತದ ದುರಾಸೆಯ ಮೇಲೆ ಆರೋಪಿಸುವುದಿಲ್ಲ. ಸರ್ವಾಧಿಕಾರಿ ಪ್ರವೃತ್ತಿಯ ಮೂಲವನ್ನು ನಮ್ಮ ಜಲಂಧರ್ ಸಮ್ಮೇಳನದ ರಾಜಕೀಯ ನಿರ್ಣಯ ಸ್ಪಷ್ಟವಾಗಿ ಬೆರಳು ಮಾಡಿ ತೋರಿಸಿದೆ. ಬಂಡವಾಳಶಾಹಿ - ಭೂ ಮಾಲೀಕ ವರ್ಗ ವ್ಯವಸ್ಥೆ ಇರುವವರೆಗೂ, ಜನತಾ ಪ್ರಜಾಪ್ರಭುತ್ವ ಕ್ರಾಂತಿ ಯಶಸ್ವಿಯಾಗುವವರೆಗೂ, ಸರ್ವಾಧಿಕಾರಿ ಪ್ರವೃತ್ತಿ ಇದ್ದೇ ಇರುತ್ತದೆ ಎಂದು ಗುರುತಿಸಿದೆ.

ಜನತಾ ಪಕ್ಷ ಅಧಿಕಾರದಲ್ಲಿದ್ದಾಗಲೇ ಜಲಂಧರ್‌ನ ಹತ್ತನೇ ಸಮ್ಮೇಳನ ನಡೆಯಿತೆಂಬುದು ಸೂಕ್ಷ್ಮವಾಗಿ ಗಮನಿಸಬೇಕಾದ ಅಂಶ. ಈ ಸಮ್ಮೇಳನ ಜನತಾ ಪಕ್ಷ ಕೂಡ ಕಾಂಗ್ರೆಸ್ಸಿನ ವರ್ಗ ಗುಣವನ್ನೇ ಹೊಂದಿದೆ, ಜನತಾ ಪಕ್ಷ ಕೂಡ ಸರ್ವಾಧಿಕಾರಿ ಪ್ರವೃತ್ತಿಯನ್ನು ಬೆಳೆಸಿಕೊಂಡೇ ಬರುತ್ತದೆ. ಜನತೆಯ ಹೋರಾಟವನ್ನು ದಮನ ಮಾಡಲು ಆಳುವ ವರ್ಗಗಳು ಉಪಯೋಗಿಸಿಕೊಳ್ಳುವ ಶಕ್ತಿಯೇ ಸರ್ವಾಧಿಕಾರ. ಬಂಡವಾಳಶಾಹಿ-ಭೂ ಮಾಲೀಕ ವ್ಯವಸ್ಥೆಯಲ್ಲಿ ಸಾಮಾನ್ಯ ಜನತೆಯನ್ನು ಸುಲಿಯುವುದು ನಡೆದೇ ಇರುತ್ತದೆ. ಜನ ತಮ್ಮ ಹಿತಗಳನ್ನು ರಕ್ಷಿಸಿಕೊಳ್ಳಲು ಹೋರಾಟ ಮಾಡುವುದು ಅನಿವಾರ್ಯವಾಗುತ್ತದೆ. ಆಳುವ ವರ್ಗಗಳು ತಮ್ಮ ನಿರಂತರ ಶೋಷಣೆಯನ್ನು ಮುಂದುವರಿಸಲು ಜನವಿರೋಧಿ ನೀತಿಗಳನ್ನು ಅನುಸರಿಸುತ್ತಾರೆ. ಜನತೆಯ ಹೋರಾಟವನ್ನು ಬಗ್ಗು ಬಡೆಯುತ್ತಾರೆ. ಸರ್ವಾಧಿಕಾರವೆಂದರೆ ಇದೇ ಅರ್ಥ.

ಶೋಷಕ ವರ್ಗಗಳ ಈ ವರ್ಗ ಗುಣವೇ ಅಲ್ಲವೇ ಅವರನ್ನು ಸರ್ವಾಧಿಕಾರದತ್ತ ಸೆಳೆಯುವುದು. ಈ ವಿಶ್ಲೇಷಣೆ ಸಾಮಾಜಿಕ-ಆರ್ಥಿಕ ಪರಿಸ್ಥಿತಿಯನ್ನು ಮನಗಾಣುವುದರಲ್ಲಿ ನಾವು ವಿಫಲರಾಗಿದ್ದೇವೆಂದು ತೋರಿಸುತ್ತವೆ. ನಾವು ಇಂದಿರಾಗಾಂಧಿಯವರನ್ನು ಕಾರಣವಿಲ್ಲದೆಯೆ ಅಪರಾಧಿಯೆಂದು ಘೋಷಿಸಿದ್ದೇವೆಂದು ಈ ವಿಶ್ಲೇಷಣೆಯಿಂದ ಅರ್ಥವಾಗುತ್ತದೆಯೆ ?

ಒಬ್ಬ ವ್ಯಕ್ತಿ ಅಥವಾ ಆಕೆಯ ಸಂತಾನ ನಮ್ಮ ದೇಶದಲ್ಲಿ ಅನುಸರಿಸುತ್ತಿರುವ ಈ ರೀತಿಯ ದಮನ ನೀತಿಯನ್ನು, ಅವರ ಕೃತಿಗಳನ್ನು, ಅವರ ವೈಯುಕ್ತಿಕ ಸೋಲುಗಳನ್ನು ಬಹಿರಂಗಗೊಳಿಸದೆಯೇ ವಿರೋಧಿಸುವುದಕ್ಕಾಗುತ್ತದೆಯೆ ? ಅವರ ಇಂತಹ ವಿರೋಧಿ ನೀತಿಗಳನ್ನು ಬಯಲಿಗೆಳೆಯುವುದನ್ನು ಕುರುಡ-ವಿರೋಧ ಎನ್ನುತ್ತಾರೆಯೆ ? ನಮ್ಮ ದೇಶದ ಸಾಮಾಜಿಕ ಆರ್ಥಿಕ ಶಕ್ತಿಗಳನ್ನು ಮನಗಾಣುವುದರಲ್ಲಿ ವಿಫಲರಾಗಿರುವುದು ಯಾರು ? ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷವೋ ಅಥವಾ ಜಿ. ರಾಮಕೃಷ್ಣ ಮತ್ತವರ ಬಳಗವೊ ?

ಜಿ. ರಾಮಕೃಷ್ಣರವರು ಸೂಕ್ಷ್ಮವಾಗಿ ಬಿತ್ತರಿಸ ಬಯಸಿದ ಈ ವಾದ ಹೊಸದೇನಲ್ಲ. ಈ ವಾದ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ತನ್ನ ಕೊನೆಯ ಹಂತವನ್ನು ತಲುಪಿತು. ಡಾಂಗೆ ಮತ್ತು ಅವರ ಗುಂಪು ಸಿಪಿಐಯನ್ನು ಎಳೆಕೊಂಡೊಯ್ಯುತ್ತಿದ್ದ ಆಳ ಪ್ರಪಾತದಿಂದ ಸ್ವಲ್ಪದರಲ್ಲಿಯೇ ತಪ್ಪಿಸಿಕೊಂಡಿತು. ಈ ಡಾಂಗೆಯವರ ನಾಯಕತ್ವದಲ್ಲಿಯೇ ಅಲ್ಲವೇ ಜಿ. ರಾಮಕೃಷ್ಣ ಮತ್ತಿತರರು 1974 ರಲ್ಲಿಯೇ ಕಾಂಗ್ರೆಸ್ (ಆರ್)ನ ಜೊತೆಗೂಡಿ ಫ್ಯಾಸಿಸ್ಟ್ ವಿರೋಧಿ ಸಮಾವೇಶ ಮಾಡಿದ್ದು. ಇಲ್ಲಿ ತಮಾಷೆಯೆಂದರೆ ಅದೇ ಇಂದಿರಾ ಕಾಂಗ್ರೆಸ್ಸು ಸರ್ವಾಧಿಕಾರದ ಎಲ್ಲ ಲಕ್ಷಣಗಳನ್ನು ಪ್ರದರ್ಶಿಸುತ್ತಿದ್ದುದು.

ಆದರೆ ಡಾಂಗೆ ಗುಂಪಿಗೆ ಫ್ಯಾಸಿಸಂ ಕಂಡಿದ್ದು ಜಯಪ್ರಕಾಶ್ ನಾರಾಯಣ್ ಮತ್ತು ಜನಸಂಘದಲ್ಲಿ ಮಾತ್ರ. ಅವರು ಕಮ್ಯೂನಿಸ್ಟ್ ಅಂತರರಾಷ್ಟ್ರೀಯ ಕಲಿಸಿದ ಮೂಲ ತತ್ವಗಳನ್ನು, ಜಾರ್ಜಿ ಡಿಮಿತ್ರೊವ್ ಫ್ಯಾಸಿಸಂ ಬಗ್ಗೆ ಕಲಿಸಿದ ಪಾಠಗಳನ್ನು ಮರೆತರು. ಯಾರು ವಿದೇಶೀ ಬಂಡವಾಳದ ಸಹವರ್ತಿಗಳಾಗಿದ್ದರೋ, ಯಾರ ಆಡಳಿತದ ನಗ್ನ ತಾಂಡವ ಫ್ಯಾಸಿಸಂ ಆಗಿತ್ತೋ, ಯಾರು ಪಾರ್ಲಿಮೆಂಟರಿ ಪ್ರಜಾಪ್ರಭುತ್ವದ ಬದಲು ನಗ್ನ ಸರ್ವಾಧಿಕಾರ ನಡೆಸಿದ್ದರೋ, ಯಾರು ದುಡಿಯುವ ವರ್ಗದ ಚಳುವಳಿಯ ಹುಟ್ಟಡಗಿಸಿ ಬಿಡಲು ಮಾಡಿದ ಪ್ರಯತ್ನಗಳು ಫ್ಯಾಸಿಸಂ ಆಗಿತ್ತೊ, ಆ ಗುತ್ತೇದಾರಿ ಬಂಡವಾಳ ಶಾಹಿಗಳ ಬಾಲಕ್ಕೆ ಜೋತು ಬಿದ್ದ ಇವರಿಗೆ ಅಲ್ಲಿ ಫ್ಯಾಸಿಸಂ ಕಾಣಿಸಲಿಲ್ಲ. ಮತ್ತೆ ಇದೆಲ್ಲ ನಡೆದಿದ್ದು ಬಿಹಾರದಲ್ಲಿ ಅವರು ಆರಂಭಿಸಿದ "ಪ್ರಜಾಪ್ರಭುತ್ವ" ವನ್ನು ರಕ್ಷಿಸುವ

(7ನೇ ಪುಟ ನೋಡಿ)

ಅರುಣ್ ಶೌರಿ "ಬಯಲು" ಗೊಳಿಸಿದ ಟೊಳ್ಳು ಸಂಗತಿಗಳು | 2

ಇತಿಹಾಸವನ್ನು ಮಬ್ಬುಗೊಳಿಸುವ 'ಸಂಶೋಧನೆ'

— ಕಾ|| ಎಂ. ಬಸವಪುನ್ನಯ್ಯ

(ಕಳೆದ ಸಂಚಿಕೆಯಿಂದ)

ನೆಹರೂ ವಿಶ್ಲೇಷಣೆ

ಅರುಣ್‌ಶೌರಿ ತನ್ನ ಸಂಶೋಧನೆಯಲ್ಲಿ ಜವಹರಲಾಲ್ ನೆಹರೂರವರು ಸೋವಿಯೆತ್ ರಷ್ಯಾ ಮತ್ತು ಅಕ್ಷಕೂಟಗಳ ಬಗ್ಗೆ ಸಾಮ್ರಾಜ್ಯಶಾಹಿಗಳ ನಿಲುವನ್ನು ಕುರಿತು ಮಾಡಿದ್ದ ವಿಶ್ಲೇಷಣೆಯನ್ನು ಗಮನಿಸಿಯೂ ಇಲ್ಲ. ಈ ವಿಶ್ಲೇಷಣೆ ರಾಷ್ಟ್ರೀಯ ಆಂದೋಲನದ ನಾಯಕತ್ವದಲ್ಲಿನ ಬಹುಮುಖ್ಯ ವಿಭಾಗದ ಆಲೋಚನೆಗಳನ್ನು ಪ್ರತಿಫಲಿಸುತ್ತವೆ.

ನೆಹರೂ ಕಂಡುಕೊಂಡ ಸಂಗತಿಗಳಿವು—"ಯುದ್ಧ ಆರಂಭವಾದ ಮೇಲೆ ಬ್ರಿಟಿಷ್ ಸರಕಾರದ ಸಂಪೂರ್ಣ ಧೋರಣೆಯಿಂದ ಅದು ಉದ್ದೇಶಪೂರ್ವಕವಾಗಿ ಮತ್ತು ಎಡೆಬಿಡದೆ ಒಂದು ಸಾಮ್ರಾಜ್ಯಶಾಹಿ ದಾರಿಯನ್ನೇ ತುಳಿಯುತ್ತಿದೆ ಎಂಬುದು ತೋರಿಬರುತ್ತದೆ. ಯುದ್ಧಕ್ಕೆ ಮುನ್ನ ಚೇಂಬರ್‌ಲೇನ್ ಸರಕಾರ ಏಕ್‌ದಂ ಪ್ರತಿಕ್ರಿಯಾವಾದಿಯೆಂದೇ ಕುಖ್ಯಾತವಾಗಿತ್ತು. ಹಲವು ಸಂದರ್ಭಗಳಲ್ಲಿ ಅದು ಫ್ಯಾಸಿಸ್ಟ್ ಮತ್ತು ನಾಝೀ ಶಕ್ತಿಗಳಿಗೆ ಪ್ರೋತ್ಸಾಹ ನೀಡಿತ್ತು. ಯುರೋಪಿನಲ್ಲಿ ಪ್ರಜಾಪ್ರಭುತ್ವವನ್ನು ತುಳಿದು ಹಾಕಿತ್ತು. ಅಬಿಸಿನಿಯಾ, ಸ್ಪೈನ್, ಆಸ್ಟ್ರಿಯಾ, ಜೆಕೋಸ್ಲೋವಾಕಿಯಾ, ಮತ್ತು ಅಲ್ಬೇನಿಯಾದ ಸಂದರ್ಭದಲ್ಲಿ ಇದು ಸಿದ್ಧವಾಯಿತು. ಮಂಚೂರಿಯಾದಲ್ಲಿ ಕೂಡಾ ಇದೇ ಮಾದರಿಯದಾಗಿತ್ತು ಅವರ ಧೋರಣೆ. ಚೇಂಬರ್‌ಲೇನ್‌ನ ಸರಕಾರ ಬ್ರಿಟನ್ ನೂರಕ್ಕೂ ಹೆಚ್ಚು ವರ್ಷಗಳ ಅವಧಿಯಲ್ಲಿ ಕಂಡ ಅತ್ಯಂತ ಪ್ರತಿಕ್ರಿಯಾವಾದಿ ಹಾಗೂ ಸಾಮ್ರಾಜ್ಯಶಾಹೀ ಸರಕಾರ ಎಂದು ಹೆಸರು ಪಡೆದಿತ್ತು"

"ಯುರೋಪಿನಲ್ಲಿ, ದೂರಪ್ರಾಚ್ಯದ ಮತ್ತು ಅಮೇರಿಕಾದಲ್ಲಿ ಕೂಡಾ ಎಲ್ಲಾ ರೀತಿಯ ಪ್ರತಿಕ್ರಿಯಾವಾದೀ ಶಕ್ತಿಗಳಿಗೆ ಪ್ರೋತ್ಸಾಹ ನೀಡುವುದು ಮತ್ತು ಈ ಎಲ್ಲಾ ರೀತಿಯ ಪ್ರತಿಕ್ರಿಯಾವಾದೀ ಶಕ್ತಿಗಳಿಗೆ ಮತ್ತು ಸಾಮ್ರಾಜ್ಯಶಾಹಿಗೆ ಸವಾಲಾಗಿ ನಿಂತಿದ್ದ ರಷ್ಯಾವನ್ನು ದುರ್ಬಲಗೊಳಿಸಲು ಪ್ರಯತ್ನಿಸುವುದೇ ಈ ಹಳೆಯ ಧೋರಣೆಯಾಗಿತ್ತು. ಒಂದೆಡೆ ನಾಝಿಗಳ ಹೆಚ್ಚುತ್ತಿರುವ ಶಕ್ತಿಯ ಭಯದಿಂದ ಕೆಲವೊಮ್ಮೆ ಅವರು ನೆರವಿಗಾಗಿ ರಷ್ಯಾದ ಮುಖ ನೋಡಬೇಕಾಗಿ ಬಂದರೂ ರಷ್ಯಾದ ಬಗ್ಗೆ ಮತ್ತು ಪ್ರಜಾಪ್ರಭುತ್ವದ ಬೆಳವಣಿಗೆ ಬಗ್ಗೆ ಅವರ ದ್ವೇಷ ಎಷ್ಟೊಂದು ಆಳವಾಗಿತ್ತೆಂದರೆ ಯಾವುದೇ ರೀತಿಯಲ್ಲಿ ರಷ್ಯಾದೊಂದಿಗೆ ಸಹಕರಿಸುವುದು ಅವರಿಗೆ ಸಾಧ್ಯವಿರಲಿಲ್ಲ. ಆದ್ದರಿಂದ ಅಂತಿಮ ಕ್ಷಣದವರೆಗೂ ಅವರು ಹಿಟ್ಲರ್ ಮತ್ತು ಮುಸೋಲಿನಿಯನ್ನು ಸಂತುಷ್ಟಗೊಳಿಸುವ ಧೋರಣೆ ಅನುಸರಿಸಿ ಅವರನ್ನು ಬಹಳಷ್ಟು ಬಲಗೊಳಿಸಿದರು. ಹಿಟ್ಲರ್‌ನನ್ನು ಸೋವಿಯೆತ್ ರಷ್ಯಾದ ವಿರುದ್ಧ ಯುದ್ಧವೊಂದರಲ್ಲಿ ಸಿಲುಕಿಸಿ ಆ ಮೂಲಕ ತಮ್ಮ ಇಬ್ಬರೂ ಶತ್ರುಗಳನ್ನು ದುರ್ಬಲಗೊಳಿಸುವುದೇ ಅವರ ಉದ್ದೇಶವಾಗಿತ್ತು. ಯಾವ ಬಗೆಯಲ್ಲೂ ಜರ್ಮನಿ ಅಥವಾ ಇಟಲಿಯಲ್ಲೂ ಪ್ರಗತಿಶೀಲ ಆಡಳಿತ ಇರುವುದು ಅವರಿಗೆ ಇಷ್ಟವಿರಲಿಲ್ಲ"

ಮುಂದುವರಿದು ನೆಹರೂ ಹೀಗೆಂದಿದ್ದಾರೆ—"ಆದ್ದರಿಂದ ರಷ್ಯಾದ ಬಗ್ಗೆ ಬ್ರಿಟನ್ನಿನ ಸದ್ಯದ ಧೋರಣೆಯ ಬಗ್ಗೆ ನಮ್ಮ ವಿಚಾರ ಸ್ಪಷ್ಟವಾಗಿರುವುದು ಅತೀ ಮಹತ್ವದ ವಿಷಯ. ನಾವು ಈ ಧೋರಣೆಯನ್ನು ವಿರೋಧಿಸುತ್ತೇವೆ ಮತ್ತು ಯಾವ ಸಂದರ್ಭದಲ್ಲೂ ರಷ್ಯಾದ ವಿರುದ್ಧ ಬ್ರಿಟಿಷ್ ಕ್ರಮವನ್ನು ಒಪ್ಪುವುದಿಲ್ಲ ಅಥವಾ ಬೆಂಬಲಿಸುವುದಿಲ್ಲ ಎಂದು ಘೋಷಿಸಬೇಕು. [ಅಬ್ದುಲ್ ಕಲಮ್ ಆಝಾದ್‌ರಿಗೆ 22·2·1940 ರಂದು ಬರೆದ ಪತ್ರದಿಂದ]

ಇಷ್ಟೇ ಅಲ್ಲ. 1940ರ ಜನವರಿ 24 ರಂದು ಮಹಾತ್ಮಾಗಾಂಧಿಯವರಿಗೆ ಬರೆದ ಪತ್ರದಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿ ಧೋರಣೆಯ ಎಲ್ಲಾ ರೀತಿ ಪಾತಕಗಳ ಬಗ್ಗೆ ಹೇಳುತ್ತಾ "ಆದ್ದರಿಂದ ನಾವು ಬಹಳ ಎಚ್ಚರದಿಂದಿರಬೇಕು, ಜಾಗರೂಕರಾಗಿರಬೇಕು ಮತ್ತು ಈ ಸಾಮ್ರಾಜ್ಯಶಾಹೀ ಯುದ್ಧೋದ್ದೇಶಗಳನ್ನು ನಾವು ಬೆಂಬಲಿಸುವುದಿಲ್ಲ ಎಂಬುದನ್ನು ಏಕ್‌ದಂ ಸ್ಪಷ್ಟಗೊಳಿಸಬೇಕು ಎಂದು ನನಗನಿಸುತ್ತದೆ" ಎಂದಿದ್ದಾರೆ.

ಮುಂದುವರಿದು "ಮೇಲೆ ಹೇಳಿದಂತೆ ಪಾಶ್ಚಿಮಾತ್ಯ ಶಕ್ತಿಗಳು ರಷ್ಯಾದ ವಿರುದ್ಧ ಒಟ್ಟುಗೂಡಿದರೆ ಮತ್ತು ಇಟಲಿಯೊಂದಿಗೆ ಅವರ ಒಳಸಂಚು ಯಶಸ್ವಿಯಾದರೆ ಬೇಗನೇ ಪರಿಸ್ಥಿತಿ ಇನ್ನಷ್ಟು ಕ್ಲಿಷ್ಟಗೊಳ್ಳುತ್ತದೆ. ತಮ್ಮ ಪ್ರಯತ್ನಗಳನ್ನು ಅವರು ಕಮ್ಯುನಿಸಂನ ವಿರುದ್ಧ ಪವಿತ್ರಯುದ್ಧ ಎಂದು ಹೇಳಿ ಅದರ ಮರೆಯಲ್ಲಿ ತಮ್ಮ ಸ್ವಂತ ಸಾಮ್ರಾಜ್ಯವನ್ನು ಬಲಪಡಿಸಿಕೊಳ್ಳಲು ಪ್ರಯತ್ನಿಸಬಹುದು ಮಾತ್ರವಲ್ಲ ಸೋವಿಯೆಟ್ ರಷ್ಯಾದ ಸಮಾಜವಾದೀ ಪ್ರಭುತ್ವವನ್ನು ಮುರಿಯಲೂ ಪ್ರಯತ್ನಿಸಬಹುದು. ಹಾಗಾದರೆ ಅದೊಂದು ಅನರ್ಥಕಾರಿ ಘಟನೆ. ರಷ್ಯನ್ ಧೋರಣೆಯನ್ನು ನಾವು ಒಪ್ಪುತ್ತೇವೋ ಇಲ್ಲವೋ ಎಂಬುದು ಬೇರೆ ಮಾತು. ಇದನ್ನು ಲಕ್ಷ್ಯದಲ್ಲಿಟ್ಟುಕೊಂಡು ಭಾರತೀಯ ಮಾತುಕತೆಗಳನ್ನು ಈ ದೃಷ್ಟಿಕೋನದಿಂದ ಕಾಣಬೇಕೆಂದು ನಾನು ನಿಮ್ಮನ್ನು ಬೇಡಿಕೊಳ್ಳುತ್ತೇನೆ" ಎಂದಿದ್ದಾರೆ ನೆಹರೂ.

1942ರ ಫೆಬ್ರುವರಿ 22 ರಂದು ನೆಹರೂ ಕಳಿಸಿದ "ಭಾರತ ಮತ್ತು ರಷ್ಯಾ" ಎಂಬ ಶಿರೋನಾಮೆಯ ಲೇಖನದಲ್ಲಿ ನೆಹರೂ ಹೇಳಿರುವ ಮಾತುಗಳಿವು—"ಭಾರತದಲ್ಲಿ ನಮ್ಮ ಈಗಿನ ಸಮಸ್ಯೆಗಳು ಕೆಲವು ವರ್ಷಗಳ ಹಿಂದೆ ರಷ್ಯಾ ಎದುರಿಸಿದ ಸಮಸ್ಯೆಗಳ ರೀತಿಯದೇ: ನಮ್ಮ ಸಮಸ್ಯೆಗಳನ್ನು ರಷ್ಯನರು ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಂಡ ವಿಧಾನದಿಂದಲೇ ಪರಿಹರಿಸಬಹುದು. ನಮ್ಮ ದೇಶವನ್ನು ಕೈಗಾರಿಕೀಕರಣ ಮತ್ತು ಶಿಕ್ಷಣದ ರೀತಿಯಲ್ಲಿ ನಾವು ಸೋವಿಯೆತ್ ಸಂಘದಿಂದ ಪಾಠ ಕಲಿಯಬೇಕು."

ರಷ್ಯಾ ಭಾರತಕ್ಕಿಂತ ಬಹಳ ಭಿನ್ನವಾಗಿದ್ದರೂ ಎರಡೂ ದೇಶಗಳು ಎದುರಿಸಬೇಕಾಗಿ ಬಂದ ಸಮಸ್ಯೆಗಳು ಒಂದೇ ರೀತಿಯವು. ಆದರೆ ತಮ್ಮ ಪ್ರಸಿದ್ಧ ಕ್ರಾಂತಿಯ ನಂತರ ರಷ್ಯನ್ನರಿಗೆ ಗಮನಾರ್ಹ ಪ್ರಗತಿ ಸಾಧಿಸಲು ಸಾಧ್ಯವಾಯಿತು. ಯಾಕೆಂದರೆ ಅವರು ತಮ್ಮ ಹಣೆಬರೆಹವನ್ನು ತಾವೇ ನಿರ್ಧರಿಸಲು ಸ್ವತಂತ್ರರಾಗಿದ್ದಾರೆ. ಈ ಬುನಾದಿಯಿಂದಾಗಿಯೇ ಎರಡನೇ ಮಹಾಯುದ್ಧದಲ್ಲಿ ಜರ್ಮನಿ ಅತಿಕ್ರಮಿಸಿದ ಯುರೋಪಿನ ದೇಶಗಳಲ್ಲೆಲ್ಲಾ ಕೇವಲ ರಷ್ಯಾಕ್ಕೆ ಮಾತ್ರ ಅತಿಕ್ರಮಣಕಾರರನ್ನು ಎದುರಿಸಲು ಸಾಧ್ಯವಾಯಿತು ಮಾತ್ರವಲ್ಲ, ಅವರು ಆಕ್ರಮಣವನ್ನು ತಡೆದು ಹಿಮ್ಮೆಟ್ಟಿಸಿದರು ಕೂಡಾ. ಹೀಗಾಗಲು ಕಾರಣ ಅವರ ಆರ್ಥಿಕ ಸಂರಚನೆಯ ಬುನಾದಿ ತುಂಬಾ ಶಕ್ತಿಶಾಲಿಯಾಗಿದ್ದು ಇಂತಹದೊಂದು ಧಾಳಿಯನ್ನು ಸಹಿಸುವುದು ಅದಕ್ಕೆ ಸಾಧ್ಯವಾಯಿತು.

ಇದೇ ರೀತಿ, ಬೇರೆಲ್ಲಾ ದೇಶಗಳು ಮೊದಲ ಎರಡು ಎರಡೂವರೆ ವರ್ಷಗಳಲ್ಲೇ ಅಸ್ತಿತ್ವವನ್ನೇ ಕಳೆದುಕೊಂಡಿದ್ದರೆ ಚೀನಾ ಐದು ವರ್ಷಗಳ ತನಕ ದಾಳಿಯನ್ನು ಎದುರಿಸಿ ನಿಂತಿತು. ಭಾರತಕ್ಕೆ ಪೂರ್ಣ ಪ್ರಮಾಣದಲ್ಲಿ ಬೆಳೆಯಲು ಅವಕಾಶ ನೀಡಿಲ್ಲ ಎಂಬುದರ ಬಗ್ಗೆ ನೆಹರು ವಿಷಾದ ವ್ಯಕ್ತಪಡಿಸಿದ್ದರು. "ಅವರು ಒಂದು ಕ್ರಾಂತಿಯ ಮಧ್ಯೆ ಇದ್ದಾರೆ. ಅದೊಂದು ಮಹಾನ್ ಕ್ರಾಂತಿ. ಅದರ ಪರಿಣಾಮ ಒಂದೆರಡು ದೇಶಗಳಿಗೆ ಮಾತ್ರವಲ್ಲ, ಭಾರತವೂ ಸೇರಿದಂತೆ ಜಗತ್ತಿನ ಎಲ್ಲಾ ದೇಶಗಳಿಗೆ ತಟ್ಟಲಿದೆ. ಚೀಣೀ ಹಾಗೂ ರಷ್ಯನ್ ಸಂಸ್ಕೃತಿ ಮತ್ತು ನಾಗರಿಕತೆಗಳು ಭಾರತೀಯ ಆರ್ಥಿಕ ಬುನಾದಿಯ ಮೇಲೆ ಪ್ರಭಾವ ಬೀರುವುದು ಖಂಡಿತ. ಇದು ಕೇವಲ ಸೈನಿಕರ ಯುದ್ಧವಲ್ಲ. ಕೆಲವು ನಿರ್ದಿಷ್ಟ ಶಕ್ತಿಗಳ ನಡುವಿನ ಹೋರಾಟವಿದು. ಶಸ್ತ್ರಾಸ್ತ್ರಗಳಿಗೆ ತಾತ್ಕಾಲಿಕ ವಿಜಯ ಸಿಕ್ಕಿತು ಎಂದು ಇಟ್ಟುಕೊಂಡರೂ ಅದು ಬಹುಕಾಲ ಉಳಿಯಲಾರದು. ಹೋರಾಟನಿರತ ಶಕ್ತಿಗಳಿಂದ ತಪ್ಪಿಸಿಕೊಳ್ಳುವುದು ಯಾರಿಗೂ ಸಾಧ್ಯವಿಲ್ಲ. ಅವನ್ನು ಮುಖಾಮುಖಿಯಾಗಿ, ಒಗ್ಗಟ್ಟಿನಿಂದ ಎದುರಿಸಲೇಬೇಕು" ಎಂದಿದ್ದಾರೆ ನೆಹರೂ.

ಕಳೆದ ಐವತ್ತು ವರ್ಷಗಳಲ್ಲಿ ನೆಹರು ಮಾತ್ರವಲ್ಲ ರಾಷ್ಟ್ರೀಯ ವಿಮೋಚನಾ ಆಂದೋಲನದ ಹಲವು ಮುಂದಾಳುಗಳು ಜಾಗತಿಕ ಸನ್ನಿವೇಶದ ಈ ವಾಸ್ತವತೆಯನ್ನು ಸುಮಾರಾಗಿ ಸರಿಯಾಗಿಯೇ ಗ್ರಹಿಸಿಕೊಂಡಿದ್ದಾರೆ. ಯಾಕೆಂದರೆ ಅವರ ಹಿತಾಸಕ್ತಿಗಳ ದೃಷ್ಟಿಯಲ್ಲಿ ಅದು ಅತೀ ಅವಶ್ಯಕ. ಚಾರಿತ್ರಿಕ ಸಂದರ್ಭಗಳಿಂದ ಕಿತ್ತು ಹೊರ ತೆಗೆದ ಕೆಲವು ಪತ್ರಗಳಿಗೆ ಮೆಮೊಗಳಿಗೆ ಹಾಗೂ ವರದಿಗಳಿಗೆ ಮಾತ್ರ ತನ್ನ ವಿಶ್ಲೇಷಣೆಯನ್ನು ಸೀಮಿತಗೊಳಿಸಿಕೊಂಡ ಶೌರಿಗೆ ಜೀವನದ ವಾಸ್ತವ ಸಂಗತಿಗಳ ಚಾರಿತ್ರಿಕ ಅರ್ಥವನ್ನು ಗ್ರಹಿಸಿಕೊಳ್ಳುವ ಸಾಮರ್ಥ್ಯವಿದೆಯೆಂದು ನಿರೀಕ್ಷಿಸುವುದು ಸಾಧ್ಯವಿಲ್ಲ.

ಪೋಲಂಡ್ ಮೇಲೆ ಧಾಳಿ

ಇದರ ಪರಿಣಾಮವಾಗಿ ಶೌರಿ ತನ್ನ ಸಂಶೋಧನೆಗಳ ಮೂಲಕ ಚಾರಿತ್ರಿಕ ಘಟನೆಗಳಿಗೆ ಸಂಬಂಧ ಪಟ್ಟಂತೆ ಆದಾಗಲೇ ಹಳಸಲಾಗಿರುವ, ಸುಳ್ಳೆಂದು ಸಾಬೀತಾಗಿರುವ ಅರ್ಥವಿವರಗಳನ್ನೆ ಮತ್ತೆ ಮತ್ತೆ ಅಂಗೀಕರಿಸಬೇಕಾಗಿ ಬಂದಿದೆ. ಸಮಾಜವಾದೀ ಸೋವಿಯೆಟ್ ಸಂಘ ಪೋಲಂಡನ್ನು ವಿಭಜಿಸುವುದಕ್ಕಾಗಿ ನಾಝೀ ಜರ್ಮನಿಯೊಂದಿಗೆ ಗುಪ್ತ ಒಪ್ಪಂದ ಮಾಡಿಕೊಂಡು ಅದರ ಪ್ರಕಾರವೇ ಪೋಲಂಡಿನ ವಿಶಾಲ ಪ್ರದೇಶಗಳನ್ನು ಆಕ್ರಮಿಸಿಕೊಂಡಿತು ಎಂದು ಆತ ಆಪಾದಿಸುತ್ತಾರೆ. ಆದರೆ ಈ ಒಪ್ಪಂದದ ಉದ್ದೇಶ ನಾಝೀ ಸೇನೆಗಳನ್ನು ರಷ್ಯಾದ ಗಡಿಗಳಿಂದ ಸಾಧ್ಯವಾದಷ್ಟು ದೂರವಿಡುವುದಕ್ಕಾಗಿಯೇ ಹೊರತು ಸೋವಿಯೆಟ್ ಸಂಘದೊಳಗೆ ಪೋಲಂಡನ್ನು ಬಲಾತ್ಕಾರವಾಗಿ ಸೇರಿಸಿಕೊಳ್ಳುವ ದುರುದ್ದೇಶದಿಂದಲ್ಲ. ಪೋಲಂಡಿನ ಬೂರ್ಜ್ವಾ–ಭೂಮಾಲೀಕರು ಹಿಟ್ಲರನಿಗೆ ಶರಣಾಗಲು ಸಿದ್ಧರಾಗಿದ್ದಾರೆಯೇ ವಿನಃ ಯುರೋಪಿನಲ್ಲಿ ಹೆಚ್ಚುತ್ತಿದ್ದ, ನಾಝೀ ಜರ್ಮನಿಯ ಪೀಡೆಯನ್ನು ಕಳೆಯಲು ಸೋವಿಯೆಟ್ ಸಂಘದ ಜತೆಗೂಡಲು ಸಿದ್ಧರಿರಲಿಲ್ಲ.

1944 ರ ಗ್ರೀಷ್ಮ ಕಾಲದಲ್ಲಿ ಕೆಂಪು ಸೇನೆ ಸೋವಿಯೆಟ್ ಪ್ರದೇಶವನ್ನು ಇಂಚೂ ಬಿಡದೆ ವಿಮೋಚನೆಗೊಳಿಸಿದ ಮೇಲಷ್ಟೇ ಅಂದರೆ 1944 ರ ಜೂನ್ ತಿಂಗಳಲ್ಲಿಯಷ್ಟೇ ಆ್ಯಂಗ್ಲೊ–ಅಮೆರಿಕನ್ ಮಿತ್ರಕೂಟ ಹಿಟ್ಲರ್ ವಿರುದ್ಧ ಎರಡನೇ ಯುದ್ಧರಂಗ ಆರಂಭಿಸಿದ್ದರು ಎಂಬುದು ಎಲ್ಲರಿಗೂ ತಿಳಿದಿರುವ ವಿಷಯ. ನಾಝೀಗಳ ಗುಲಾಮತನಕ್ಕೊಳಗಾದ ಯುರೋಪಿನ ಜನತೆಗಳನ್ನು ವಿಮೋಚನೆಗೊಳಿಸುವಲ್ಲಿ ಸೋವಿಯೆಟ್ ಸಂಘದ ಹತ್ತು ಲಕ್ಷಕ್ಕೂ ಹೆಚ್ಚು ಸಂಖ್ಯೆಯ ಸೈನಿಕರು ಪ್ರಾಣಾರ್ಪಣೆ ಮಾಡಿದರು. ಇದರಲ್ಲಿ ಸುಮಾರು 6 ಲಕ್ಷದಷ್ಟು ಸೈನಿಕರು ಕೇವಲ ಪೋಲಂಡ್‌ನ ವಿಮೋಚನೆಗಾಗಿಯೇ ಬಲಿದಾನ ನೀಡಿದರು. ಆದರೂ ತಾವು ಸಂಶೋಧಕರು ಎಂದು ಹೇಳಿಕೊಳ್ಳುವ ಜನ ಸೋವಿಯೆಟ್ ನಾಯಕತ್ವ ಹಿಟ್ಲರ್ ಜರ್ಮನಿಯೊಂದಿಗೆ ಕೈಮಿಲಾಯಿಸಿ ಪೋಲಂಡ್‌ನ ವಿಭಜನೆಯ ಯೋಜನೆ ಹಾಕಿದರು ಎಂದು ಸುಳ್ಳು ಹೇಳುತ್ತಿದ್ದಾರೆ. ಸಾಮ್ರಾಜ್ಯಶಾಹಿ ಆಕ್ರಮಣಕಾರರು ಹಾಗೂ ಕೊಲೆಗಡುಕರುಗಳಿಗೆ "ಪಾಶ್ಚಿಮಾತ್ಯ ಪ್ರಜಾ ಸತ್ತೆಗಳು" ಎಂಬ ಗೌರವಪೂರಿತ ಪದವಿ ನೀಡಿ ಸಮಾಜವಾದೀ ಸೋವಿಯೆಟ್ ಸಂಘವನ್ನು "ಸರ್ವಾಧಿಕಾರಶಾಹಿ" "ವಿಸ್ತರಣಾಶಾಹಿ" ಎಂದೆಲ್ಲಾ ವರ್ಣಿಲಾಗುತ್ತಿದೆ. ಇಂತಹ ಸಂಗತಿಗಳ ಆಧಾರದ ಮೇಲೇನೇ ಸಿ.ಪಿ.ಐ ಮತ್ತು ಇತರ ಜಾಗತಿಕ ಕಮ್ಯೂನಿಸ್ಟ್ ತುಕಡಿಗಳು ಸೋವಿಯೆಟ್ ಸಂಘ ಬೇರೆ ದೇಶಗಳ, ರಾಷ್ಟ್ರಗಳ, ಆಕ್ರಮಣ ನಡೆಸುವಾಗ ಅದಕ್ಕೆ "ಪ್ರೋತ್ಸಾಹ ಮತ್ತು ಒಪ್ಪಿಗೆ" ನೀಡಿದವು ಎಂಬ ಮಿಥ್ಯೆಯನ್ನು ಪ್ರಚಾರ ಮಾಡಲಾಗುತ್ತಿದೆ!

ಫಿನ್‌ಲ್ಯಾಂಡಿನಲ್ಲಿ ಮಧ್ಯ ಪ್ರವೇಶ

ವಿಸ್ತರಣಾಶಾಹಿ ಉದ್ದೇಶದ ಬಗ್ಗೆ ಕೊಡುವ ಇನ್ನೊಂದು ನಮಕಲು ಉದಾಹರಣೆಯೆಂದರೆ ಫಿನ್‌ಲ್ಯಾಂಡ್‌ನಲ್ಲಿ

ಸೋವಿಯೆಟ್ ಮಧ್ಯಪ್ರವೇಶ ಫಿನ್‌ಲ್ಯಾಂಡ್‌ನ ಸ್ವಾತಂತ್ರ್ಯದ ಘೋಷಣೆಗೆ ಸಹಿಹಾಕಿ ಅದನ್ನು ಫಿನ್ನಿಷ್ ಪ್ರತಿನಿಧಿ ಮಂಡಲಿಗೆ ಒಪ್ಪಿಸಿದವರು ಲೆನಿನ್. ಹೊಸ ಸೋವಿಯೆಟ್ ಪ್ರಭುತ್ವದ ಮುಖ್ಯಸ್ಥನಾಗಿ ಅವರು ಸಹಿ ಹಾಕಿದ್ದರು. ಅಂದಿನಿಂದ 1939 ರ ನವೆಂಬರ್ 30 ರ ವರೆಗೆ ಚಿಕ್ಕ ನೆರೆದೇಶವಾದ ಫಿನ್‌ಲ್ಯಾಂಡ್‌ಗೆ ತುಸುವಾದರೂ ಕಿರುಕುಳ ಎನ್ನಬಹುದಾದ ಒಂದೇ ಒಂದು ಘಟನೆಯೂ ನಡೆದಿರಲಿಲ್ಲ. ನವೆಂಬರ್ 30 ರಂದು ಕೂಡಾ ಸೋವಿಯೆಟ್ ಮಧ್ಯಪ್ರವೇಶ ನಡೆಸಲು ಫಿನ್‌ಲ್ಯಾಂಡ್‌ನ ಗಡಿಯಿಂದ ಕೇವಲ 20 ಮೈಲಿಗಳ ದೂರದಲ್ಲಿರುವ ಲೆನಿನ್‌ಗ್ರಾಡ್‌ನ ಭದ್ರತೆಗೆ ಸಂಬಂಧಪಟ್ಟ ಪ್ರಮುಖ ಪ್ರಶ್ನೆಯನ್ನು ಶಾಂತಿಯುತವಾಗಿ ಬಗೆಹರಿಸುವಂತೆ ಫಿನ್‌ಲ್ಯಾಂಡ್‌ನ ಬೂರ್ಜ್ವಾ ಭೂಮಾಲಿಕ ಸರಕಾರವನ್ನು ಒಪ್ಪಿಸಲು ಸೋವಿಯೆಟ್ ಸಂಘ ನಡೆಸಿದ ಎಲ್ಲಾ ಪ್ರಯತ್ನಗಳು ವಿಫಲಗೊಂಡುದೇ ಕಾರಣವಾಗಿತ್ತು.

ಫಿನ್‌ಲ್ಯಾಂಡ್‌ನ ಬೂರ್ಜ್ವಾ-ಭೂಮಾಲಕ ಸರಕಾರ ಸೋವಿಯೆತ್ ಸಂಘದೊಳಗೆ ಅತಿಕ್ರಮ ನಡೆಸಲು ಸಾಧ್ಯವಿತ್ತು. ಎಂದು ಯಾರೂ ವಾದಿಸುವುದಿಲ್ಲ. ಆದರೆ ಅದೇ ರೀತಿ ಫಿನ್‌ಲ್ಯಾಂಡ್ ಸರಕಾರ ನಾಝೀ ಜರ್ಮನಿಯಿಂದ ಶಸ್ತ್ರ ಸಹಾಯ ಪಡೆದು "ಮ್ಯಾನರ್‌ಹೈಮ್‌ಲೈನ್" ಎಂಬುದನ್ನು ಕಟ್ಟಿ ಸೋವಿಯೆಟ್ ಸಂಘದ ಎರಡನೇ ಅತ್ಯಂತ ದೊಡ್ಡ ಕೈಗಾರಿಕಾನಗರ ಲೆನಿನ್‌ಗ್ರಾಡ್‌ನ ಮೇಲೆ ನಾಝೀ ಆಕ್ರಮಣಕ್ಕೆ ನೆಲೆ ಒದಗಿಸಿಕೊಟ್ಟಿತ್ತು. ಎಂಬುದನ್ನು ಕೂಡಾ ಯಾರೂ ಅಲ್ಲಗಳೆಯುವಂತಿಲ್ಲ. ಈ ಸುಪ್ರಸಿದ್ಧ "ಮ್ಯಾನರ್‌ಹೈಮ್ ಲೈನ್"ನ್ನು ಬುಡಮೇಲು ಮಾಡಿ ಒಂದು ಶಾಂತಿ ಸಂಧಿಗೆ ಸಹಿ ಹಾಕಿ ಅದಕ್ಕೆ ಸಮನಾದ ಪ್ರದೇಶವನ್ನು ಫಿನ್‌ಲ್ಯಾಂಡ್‌ಗೆ ಬಿಟ್ಟುಕೊಡುವ ಮೂಲಕ ಲೆನಿನ್ ಗ್ರಾಡ್‌ನೊಳಗೆ ಅತಿಕ್ರಮಣ ನಡೆಸಿ ಅದನ್ನು ವಶಪಡಿಸಿಕೊಳ್ಳುವ ನಾಝೀ ಪಿತೂರಿಯನ್ನು ಸೋವಿಯೆಟ್ ಕಂಪುಸೇನೆ ಮುರಿಯಲೇ ಬೇಕಾಗಿತ್ತು.

ಪೂರ್ತಿಯಾಗಿ ಮೂರುವರ್ಷಗಳ ಕಾಲ ಹಸಿವಿನಿಂದ, ನಾಝೀ ಬಾಂಬುಗಳ ಸುರಿಮಳೆಯಿಂದಾಗಿ ಲಕ್ಷಾಂತರ ನಾಗರೀಕರನ್ನು ಕಳಕೊಂಡ ಲೆನಿನ್‌ಗ್ರಾಡ್‌ನ ಸ್ಥಿತಿಯನ್ನು ಇತಿಹಾಸದ ಯಾವುದೇ ಹೊಸ ಅನನುಭವಿ ವಿದ್ಯಾರ್ಥಿ ಕೂಡಾ ಅರಿತುಕೊಳ್ಳಬಲ್ಲ. ಅಲ್ಲದೆ ಲೆನಿನ್‌ಗ್ರಾಡ್ ಫ್ಯಾಸಿಸ್ಟ್ ಕೈಗೆ ಹೋಗಿದ್ದರೆ ಸೋವಿಯೆಟ್ ಸಂಘ ನಾಝೀಗಳ ವಶವಾಗುವ ಅಪಾಯ ಎಷ್ಟಿತ್ತು ಎಂಬುದನ್ನು ಆತ ತಿಳಿದುಕೊಳ್ಳಬಲ್ಲ.

1964 ರ ಸೆಪ್ಟಂಬರ್ 25 ರಂದು ಫಿನ್‌ಲ್ಯಾಂಡ್‌ನ ಅಧ್ಯಕ್ಷ ಶ್ರೀಯುತ ಕೆಕ್ಕೊನೆನ್‌ರು ತನ್ನ ಭಾಷಣದಲ್ಲಿ ಹೇಳಿದ ಕೆಲವು ಅಂಶಗಳನ್ನು ನಾವಿಲ್ಲಿ ಉದಾಹರಿಸಬಹುದು—" ಇಂದು, ಅಂದರೆ ಎರಡು ದಶಕಗಳ ನಂತರ ನಾವು ನಮ್ಮನ್ನು ಸೋವಿಯೆಟ್ ಸಂಘದ ಸ್ಥಾನದಲ್ಲಿರಿಸಿಕೊಂಡು 1941 ರಲ್ಲಿ ಅದರ ಮೇಲೆ ಹಿಟ್ಲರ್ ನಡೆಸಿದ ದಾಳಿಯನ್ನು ಗಮನದಲ್ಲಿಟ್ಟುಕೊಂಡು ನೋಡಿದರೆ 1930 ರ ದಶಕದಲ್ಲಿ ಸೋವಿಯೆಟ್ ಸಂಘ ತನ್ನ ಭದ್ರತೆಯ ಬಗ್ಗೆ ಎಂಥಾ ಆತಂಕ ಹೊಂದಿತ್ತು, ಹೊಂದಿರಲೇಬೇಕಾಗಿತ್ತು ಎನ್ನುವುದನ್ನು ಅರ್ಥಮಾಡಿಕೊಳ್ಳಬಹುದು" (ಯು. ಕೆ. ಕೆಕ್ಕೊನೆನ್‌ರ ಭಾಷಣಗಳು—1963-67).

ಹೀಗಿದ್ದರೂ ಕೂಡಾ ನಾಝೀಪರವಾಗಿದ್ದ ಫಿನ್‌ಲ್ಯಾಂಡ್‌ನ ಆಡಳಿತಕ್ಕೆ ಸಂಬಂಧಪಟ್ಟಂತೆ ಸೋವಿಯೆಟ್ ಸಂಘ ಕೈಗೊಂಡ ಕ್ರಮಗಳು ಸರಿಯಲ್ಲ ಎಂದು ವಾದಿಸುವ ಸೋವಿಯೆಟ್ ಸಾಮ್ರಾಜ್ಯದೊಳಗೆ ಫಿನ್‌ಲ್ಯಾಂಡನ್ನು ಬಲಾತ್ಕಾರವಾಗಿ ಸೇರಿಸಿಕೊಳ್ಳಲು ಸೋವಿಯೆಟ್ ಸಂಘ "ಅತಿಕ್ರಮಣ" ನಡೆಸಿತು ಎಂಬ ಈಗ ಆದಾಗಲೇ ಸುಳ್ಳೆಂದು ಸಿದ್ಧವಾಗಿರುವ ಸಂಗತಿ ಹೇಳಿರಾಗ ಹಾಡುವ ಧೈರ್ಯತೋರುವ "ಇತಿಹಾಸಕಾರರು" ಇನ್ನೂ ಇದ್ದಾರೆ! ತನ್ನ ರಾಜಕೀಯವಾಗಿ ಕುರುಡನಾದವನ ಕಣ್ಣನ್ನು ತೆರೆಸುವುದು ಯಾರಿಗೆ ತಾನೇ ಸಾಧ್ಯ ?

ವಿದೇಶೀ ಧೋರಣೆ ಬಗ್ಗೆ ಲೆನಿನ್

ನಾಝೀ ಜರ್ಮನಿಯೊಂದಿಗೆ ಸಮಾಜವಾದೀ ಸೋವಿಯತ್ ಸಂಘ ಮಾಡಿಕೊಂಡ ಅನಾಕ್ರಮಣ ಸಂಧಿ ಸ್ಟಾಲಿನ್‌ರ "ಸಮಯಸಾಧಕ ಕುಹಕತನ"ದ ಫಲ ಎಂದು ಸಾಧಿಸಲು ಸಾಧ್ಯವಾದರೆ, ಆ ಸಂಧಿ ನಾಝಿಗಳನ್ನು ಸಂತೃಪ್ತಗೊಳಿಸಲು ನಡೆಸಿದ ಒಂದು ಪ್ರಯತ್ನ ಎಂದೂ ಕೂಡಾ ಸಾಧಿಸಬಹುದು ಎಂದು ಶ್ರೀಮಾನ್ ಶೌರಿಯಂತಹವರು ಕೆಲವರು ಇನ್ನೂ ಭಾವಿಸಿಕೊಂಡಿದ್ದಾರೆ.

ಈ ತಿಳಿಗೇಡಿ ಭಾವನೆಯನ್ನು ಹೋಗಲಾಡಿಸಲು ಶತ್ರುಗಳಿಂದ ಸುತ್ತುವರಿಯಲ್ಪಟ್ಟ, ಯುದ್ಧಗಳಲ್ಲಿ ಮುಳುಗಿಹೋಗಿದ್ದ ಸೋವಿಯತ್ ಸಂಘದ ವಿದೇಶೀಧೋರಣೆಯ ಆಧಾರಭೂತ ಅಂಶಗಳನ್ನು ರೂಪಿಸಿದ ಲೆನಿನ್‌ರಿಂದಲೇ ಉದಾಹರಣೆಗಳನ್ನು ನೀಡಬಹುದು. ಈ ಧೋರಣೆ ಪೂರ್ಣವಾಗಿ ಒತ್ತು ನೀಡಿರುವುದು ಸಾಮ್ರಾಜ್ಯಶಾಹೀ ಶತ್ರು ಶಕ್ತಿಗಳ ದಾಳಿಗಳಿಂದ ಏಕಾಂಗಿಯಾದ ರಶ್ಯನ್ ಸಮಾಜವಾದೀ ಪ್ರಭುತ್ವವನ್ನು ರಕ್ಷಿಸಿಕೊಳ್ಳಲು ಸಾಮ್ರಾಜ್ಯಶಾಹಿಗಳ ಆಂತರಿಕ ವೈರುಧ್ಯಗಳನ್ನು ಬಳಸಿಕೊಳ್ಳಬೇಕು ಎನ್ನುವುದರ ಮೇಲೇನೇ.

ಲೆನಿನ್ ನಮೂದಿಸಿದ ತತ್ತ್ವವಿದು—"ರಾಜಕೀಯ ದೃಷ್ಟಿಕೋನದಿಂದ ರಿಯಾಯ್ತಿಗಳ ಪ್ರಶ್ನೆ ಕುರಿತಂತೆ ಮೂಲಭೂತ ವಿಷಯ ನಾವು ಸೈದ್ಧಾಂತಿಕವಾಗಿ ನಮ್ಮದಾಗಿಸಿಕೊಂಡಿರುವುದಷ್ಟೇ ಅಲ್ಲ, ಕಾರ್ಯತಃ ಕೂಡಾ ಅನ್ವಯಿಸಿಕೊಂಡಿರುವ ನಿಯಮ.

ಇತ್ತೀಚೆಗೆ 'ಇಲ್ಲಸ್ಟ್ರೇಟೆಡ್ ವೀಕ್ಲಿ' ಯಲ್ಲಿ ಪತ್ರಕರ್ತ ಅರುಣ್ ಶೌರಿ 1940 ರ ದಶಕದಲ್ಲಿ ರಾಷ್ಟ್ರೀಯ ಆಂದೋಲನಕ್ಕೆ ಕಮ್ಯೂನಿಸ್ಟರು ಬಗೆದ 'ವಿಶ್ವಾಸ ಘಾತ'ವನ್ನು ಕುರಿತು ಬರೆದಿದ್ದ ಲೇಖನಗಳಿಗೆ ಸಿಪಿಐ [ಎಂ] ನ ಪೊಲಿಟ್‌ಬ್ಯೂರೋ ಸದಸ್ಯರಾದ ಕಾ. ಎಂ. ಬಸವಪುನ್ನಯ್ಯ ಅವರು ಬರೆದ ಉತ್ತರ ಇಲ್ಲಸ್ಟ್ರೇಟೆಡ್ ವೀಕ್ಲಿ'ಯ ಜೂನ್ 3-9 ರ ಸಂಚಿಕೆಯಿಂದ ಪ್ರಾರಂಭವಾಗಿದೆ. ಉತ್ತರವು 4 ಭಾಗಗಳಲ್ಲಿದ್ದು ಮೊದಲನೆಯ ಭಾಗದ ಕನ್ನಡ ಅನುವಾದವನ್ನು 'ಐಕ್ಯರಂಗ'ದ ಕಳೆದ ಸಂಚಿಕೆಯಿಂದ ಪ್ರಾರಂಭಿಸಲಾಗಿದೆ. ಈ ಸಂಚಿಕೆಯಲ್ಲಿ ಲೇಖನದ ಮೊದಲನೆಯ ಭಾಗದ ಎರಡನೆಯ ಹಾಗೂ ಕೊನೆಯ ಕಂತನ್ನು ಪ್ರಕಟಿಸುತ್ತಿದ್ದೇವೆ.

ಈ ರಿಯಾಯ್ತಿಗಳಲ್ಲಿ ರಾಜಕೀಯ ಮತ್ತು ಆರ್ಥಿಕ ಎರಡೂ ಅಂಶಗಳು ಸೇರಿವೆ. ಮತ್ತು ಜಗತ್ತಿನಾದ್ಯಂತ ಸಮಾಜವಾದ ಅಂತಿಮ ವಿಜಯ ಸಾಧಿಸುವವರೆಗೂ ನಮಗೆ ಮೂಲಭೂತವಾಗಿಯೇ ಉಳಿಯುವ ನಿಯಮವಿದು; ಎರಡು ಸಾಮ್ರಾಜ್ಯಶಾಹಿಗಳ ನಡುವೆ, ಬಂಡವಾಳಶಾಹೀ ಪ್ರಭುತ್ವಗಳ ಎರಡು ಗುಂಪುಗಳ ನಡುವೆ ಇರುವ ವೈಷಮ್ಯಗಳ, ವೈರುಧ್ಯಗಳ ಲಾಭ ಪಡೆದು, ಅವರನ್ನು ಪರಸ್ಪರರ ವಿರುದ್ಧ ಎತ್ತಿಕಟ್ಟಬೇಕು. ನಾವು ಸಮಸ್ತವನ್ನೂ ಗೆದ್ದುಕೊಳ್ಳುವವರೆಗೆ ಮತ್ತು ಬಂಡವಾಳಶಾಹೀ ಜಗತ್ತಿಗಿಂತ ಆರ್ಥಿಕವಾಗಿ, ಸೈನಿಕ ಶಕ್ತಿಯಲ್ಲಿ ದುರ್ಬಲರಾಗಿರುವವರೆಗೆ ಸಾಮ್ರಾಜ್ಯಶಾಹಿಗಳ ನಡುವಿನ ವೈಷಮ್ಯ ಮತ್ತು ವೈರುಧ್ಯಗಳ ಲಾಭ ಪಡೆಯಲು ಶಕ್ತರಾಗಬೇಕು ಎಂಬ ನಿಯಮಕ್ಕೆ ಬದ್ಧರಾಗಿರಬೇಕಾಗುತ್ತದೆ. ನಾವು ಈ ನಿಯಮಕ್ಕೆ ಅಂಟಿಕೊಂಡಿರದಿದ್ದರೆ ನಮ್ಮಲ್ಲಿ ಪ್ರತಿಯೊಬ್ಬರ ಕತ್ತೂ ಕೂಡಾ ನೇಣುಗಂಬದ ಉರುಳಿನಲ್ಲಿ ಸಿಲುಕಿರುವುದನ್ನು ಕಂಡು ಬಂಡವಾಳಶಾಹಿಗಳು ನಲಿದಾಡುತ್ತಿದ್ದರು. ಈ ವಿಷಯದಲ್ಲಿ ನಮ್ಮ ಪ್ರಾಮುಖ್ಯವಾದ ಅನುಭವವೆಂದರೆ ಬ್ರೆಸ್ಟ್-ಲಿಟೋವಸ್ಕ್ ಒಡಂಬಡಿಕೆ.... ಅದು ಮಹತ್ವಪೂರ್ಣವಾಗಲು ಕಾರಣ- ಮೊತ್ತಮೊದಲ ಬಾರಿಗೆ ಸಾಮ್ರಾಜ್ಯಶಾಹಿಗಳ ನಡುವಿನ ವೈರುಧ್ಯಗಳನ್ನು ವ್ಯಾಪಕ ಪ್ರಮಾಣದಲ್ಲಿ ಮತ್ತು ಅಸಂಖ್ಯ ತೊಂದರೆಗಳಿದ್ದಾಗ್ಯೂ ನಮ್ಮ ಲಾಭಕ್ಕೆ ಬಳಸಿಕೊಳ್ಳಲು, ಅಂತಿಮವಾಗಿ ಸಮಾಜವಾದವೇ ಲಾಭ ಗಳಿಸುವ ರೀತಿಯಲ್ಲಿ ಉಪಯೋಗಿಸಿಕೊಳ್ಳಲು ನಮಗೆ ಸಾಧ್ಯವಾಯಿತು." (ಲೆನಿನ್, ಸಂಕಲಿತ ಕೃತಿಗಳು. ಸಂಪುಟ 1, ಪುಟ 438)

ಕಳ್ಳರು ಕಿತ್ತಾಡಿದಾಗಲೆಲ್ಲಾ....

"ಸದ್ಯ ನಾವು ಇಬ್ಬರು ಶತ್ರುಗಳ ನಡುವೆ ನಿಂತಿದ್ದೇವೆ. ಇಬ್ಬರನ್ನೂ ಸೋಲಿಸುವುದು ನಮಗೆ ಸಾಧ್ಯವಾಗದಿದ್ದಲ್ಲಿ ನಮ್ಮ ಶತ್ರುಗಳು ತಮ್ಮ-ತಮ್ಮಲ್ಲೇ ಕಿತ್ತಾಡುವಂತೆ ಮಾಡಲು ನಮಗೆ ಸಾಧ್ಯವಾಗಬೇಕು; ಕಳ್ಳರು ಕಿತ್ತಾಡಿದಾಗಲೆಲ್ಲಾ, ಪ್ರಾಮಾಣಿಕ ವ್ಯಕ್ತಿಗಳು ಸ್ವಂತಿಕೆ ಪಡೆದುಕೊಳ್ಳುತ್ತಾರೆ." [ಮೇಲಿನದ್ದೇ. ಪುಟ 441]

ಲೆನಿನ್ ನಮೂದಿಸಿದ ಈ ನಿಯಮ ಒಂದು ಅಲ್ಪ ಬುದ್ಧಿಯ ಸಮಯಸಾಧಕ ಕುಟಿಲ ತಂತ್ರ ಎಂದು ತಿಳಿಯಲಾಗದು. ಇದಕ್ಕೆ ಲೆನಿನ್ ಹಾಕಿಕೊಟ್ಟಿರುವ ಸೈದ್ಧಾಂತಿಕ ನೆಲೆಗಟ್ಟು ಹೀಗಿದೆ.

"ನಾವು ನಮ್ಮ ವಿರೋಧಿಗಳ ನಡುವಿನ ಭಿನ್ನಾಭಿಪ್ರಾಯಗಳ ರಾಜಕೀಯ ಲಾಭ ಪಡೆಯಲೇಬೇಕು ಆದರೆ ಆಳವಾದ ಆರ್ಥಿಕ ಕಾರಣಗಳಿಂದುಂಟಾದ ಪ್ರಮುಖ ಭಿನ್ನಾಭಿಪ್ರಾಯಗಳಿಂದ ಮಾತ್ರ ಹೀಗೆ ಲಾಭ ಪಡೆಯಬೇಕು. ಅಮುಖ್ಯವಾದ ಮತ್ತು ಆಕಸ್ಮಿಕವಾದ ಭಿನ್ನಾಭಿಪ್ರಾಯಗಳ ದುರ್ಲಾಭ ಪಡೆಯಲು ನಾವು ಪ್ರಯತ್ನಿಸಿದರೆ ಅಲ್ಪ ರಾಜಕಾರಣಿಗಳಂತೆ ಮತ್ತು ಅಗ್ಗದ ರಾಯಭಾರಿಗಳ ರೀತಿಯಲ್ಲಿ ವರ್ತಿಸಿದಂತಾಗುತ್ತದೆ. ಆದರಿಂದ ಬೆಲೆಬಾಳುವಂತಹದ್ದೇನನ್ನೂ ಸಾಧಿಸಲಾಗುವುದಿಲ್ಲ.

"ಪ್ರಸ್ತುತ ಸಂದರ್ಭದಲ್ಲಿ ನಾವು ಬಳಸಿಕೊಳ್ಳಬಹುದಾದ ತೀವ್ರ ವೈರುಧ್ಯಗಳೇನಾದರೂ ಬಂಡವಾಳಶಾಹೀ ಜಗತ್ತಿನಲ್ಲಿ ಇವೆಯೇ ? ಹೌದು ಇವೆ. ಮೂರು ಪ್ರಮುಖ ವೈರುಧ್ಯಗಳಿವೆ. ಅವುಗಳನ್ನು ಒಂದೊಂದಾಗಿ ಪರಿಶೀಲಿಸೋಣ. ಮೊದಲನೆಯದು, ಜಪಾನ್ ಮತ್ತು ಅಮೆರಿಕಾದ ನಡುವಿನ ಸಂಬಂಧ ನಮ್ಮ ಮೇಲೆ ಅತ್ಯಂತ ನಿಕಟ ಪ್ರಭಾವ ಬೀರುವಂತಹದು. ಅವರ ನಡುವೆ ಯುದ್ಧ ಉದ್ಭವಗೊಳ್ಳುತ್ತಿದೆ. ಶಾಂತಿಸಾಗರದ ತಟಗಳ ನಡುವೆ ಸಾವಿರಾರು ಮೈಲಿಗಳ ಅಂತರವಿದ್ದರೂ ಅತ್ತ ಮತ್ತು ಇತ್ತ ತಟಗಳಲ್ಲಿರುವ ಇವರು ಶಾಂತಿಯುತವಾಗಿ ಜತೆಗಿರುವುದು ಸಾಧ್ಯವಿಲ್ಲ. ಪರಸ್ಪರ ಸ್ಪರ್ಧಿಸದೆಯೂ ಈ ಪ್ರತಿಸ್ಪರ್ಧೆ ಮಾಡಿರುವುದು ಅವರ ಬಂಡವಾಳ ವ್ಯವಸ್ಥೆಗಳ ನಡುವಿನ ಸಂಬಂಧಗಳಿಂದಲೇ.... ಯುದ್ಧ ಉದ್ಭವಗೊಳ್ಳುತ್ತಿದೆ ಎಂಬುದು ನಿಸ್ಸಂಶಯ ಅದು ಅಪರಿಹಾರ್ಯ-'' (ಮೇಲಿನದ್ದೇ ಪುಟ 442)

ಲೆನಿನ್ ಸ್ಪಷ್ಟವಾಗಿ ತೋರಿಸಿಕೊಟ್ಟಿರುವ ಕಾರ್ಯತಂತ್ರವಿದು– "ನಾವು ಬಂಡವಾಳಶಾಹಿ ದರೋಡೆಕಾರರಂತಹ ಪಟಿಂಗರನ್ನು, ನಮ್ಮನ್ನು ಇರಿಯಲು ಸಿದ್ಧರಾಗಿರುವ, ಪಟಿಂಗರನ್ನು ಸಹಿಸಿಕೊಳ್ಳಲೇಬೇಕಾಗಿ ಬಂದಾಗ ಅವರ ಚೂರಿಗಳನ್ನು ಪರಸ್ಪರ ವಿರುದ್ಧವೇ ಝಳಪಿಸಿಕೊಳ್ಳುವಂತೆ ಮಾಡುವುದು ನಮ್ಮ ಪರಮ ಕರ್ತವ್ಯ. ಕಳ್ಳರು ಕಿತ್ತಾಡಿದಾಗಲೆಲ್ಲಾ ಪ್ರಾಮಾಣಿಕ ವ್ಯಕ್ತಿಗಳು ಸ್ವಂತಿಕೆ ಪಡೆದುಕೊಳ್ಳುತ್ತಾರೆ"

ಅಮೆರಿಕಾ ಇತರೆಲ್ಲಾ ದೇಶಗಳಿಗಿಂತ ಶ್ರೀಮಂತವಾಗಿರುವ ಆಳವಾದ ಆರ್ಥಿಕ ಕಾರಣವೇ ಅಮೇರಿಕಾ ಮತ್ತು ಇತರ ದೇಶಗಳ ನಡುವಿನ ವೈರುಧ್ಯದ ಮೂಲವಾಗಿರುವುದರಿಂದ "ಅಮೆರಿಕಾ ಮತ್ತು ಇತರ ಬಂಡವಾಳಶಾಹಿ ದೇಶಗಳ ನಡುವಿನ ಭಿನ್ನಾಭಿಪ್ರಾಯಗಳನ್ನು ಉಲ್ಬಣಗೊಳಿಸುವ ಸಣ್ಣ ಅವಕಾಶ ದೊರೆತರೂ ಅದನ್ನು ಎರಡೂಕೈಗಳಿಂದ ಬಾಚಿಕೊಳ್ಳಬೇಕು." ಎಂದು ವಾದಿಸಿದ್ದಾರೆ, ಲೆನಿನ್ (ಮೇಲಿನದ್ದೇ ಸಂ-ಪುಟ 449).

ಆ ಕಾಲಘಟ್ಟದ ಮೂರು ವೈರುಧ್ಯಗಳ ಕಾರಣಗಳನ್ನು ಮತ್ತು ಪರಿಣಾಮಗಳನ್ನು ಚರ್ಚಿಸಿದ ನಂತರ ಲೆನಿನ್ "ನಾವೂ ಅದೇ ರೀತಿ ಅಮೇರಿಕಾವನ್ನು ಜಪಾನಿನ ವಿರುದ್ಧ, ಸಮಸ್ತ ಎಂಟ್ಯಾಂಟ್ (ಒಂದು ಪರಸ್ಪರ ಒಡಂಬಡಿಕೆಗೆ ಬಂದ ಮಿತ್ರಕೂಟದ) ದೇಶಗಳನ್ನು ಅಮೇರಿಕಾದ ವಿರುದ್ಧ ಮತ್ತು ಸಮಸ್ತ ಜರ್ಮನಿಯನ್ನು ಎಂಟ್ಯಾಂಟ್ ದೇಶಗಳ ವಿರುದ್ಧ ಎತ್ತಿಕಟ್ಟುತ್ತೇವೆ" ಎಂದು ಘೋಷಿಸಿದ್ದಾರೆ. (ಮೇಲಿನದ್ದೇ ಪುಟ 450)

ಸಮಾಜವಾದಿಗಳ ಕಾರ್ಯತಂತ್ರ

ಬೂರ್ಜ್ವಾಗಳ ಅಧಿನಾಯಕತ್ವ ಪ್ರಯತ್ನಕ್ಕೆ ವ್ಯತಿರಿಕ್ತವಾಗಿ ಸಮಾಜವಾದಿಗಳ ಕಾರ್ಯಭಾರಗಳನ್ನು ರೂಪಿಸುತ್ತಾ ಲೆನಿನ್ "ಬೂರ್ಜ್ವಾಗಳ ವರ್ಗದ ಮೇಲೆ ವಿಜಯ ಸಾಧಿಸಲು, ಕಾರ್ಮಿಕರ ಕೈಗಳಿಗೆ ಅಧಿಕಾರ ಬರುವಂತಾಗಲು, ಜಾಗತಿಕ ಕಾರ್ಮಿಕ ವರ್ಗದ ಕ್ರಾಂತಿ ಆರಂಭಿಸಲು ನಾವು ನಮ್ಮ ಪ್ರದೇಶದ ಒಂದು ಭಾಗವನ್ನು ತ್ಯಾಗ ಮಾಡುವುದು ಮತ್ತು ಸಾಮ್ರಾಜ್ಯಶಾಹಿಗಳಿಂದ ಭಾರೀ ಸೋಲಿಗಾಗಿ ಕೂಡಾ ತ್ಯಾಗ ಮಾಡುವುದು ಸೇರಿದಂತೆ ಎಂಥಾ ಹಿರಿದಾದ ತ್ಯಾಗಕ್ಕೂ ಸಿದ್ಧನಾಗಲು ಹಿಂಜರಿಯಲು ಒಬ್ಬ ನಿಜವಾದ ಸಮಾಜವಾದಿಗೆ ಸಾಧ್ಯವೂ ಇಲ್ಲ ಹಾಗೆ ಹಿಂಜರಿಯಲೂಬಾರದು. ಸಮಾಜವಾದೀ ಕ್ರಾಂತಿಗುರಿ ಧ್ಯೇಯವನ್ನು ನಿಜವಾಗಿಯೂ ಭರದಿಂದ ಸಾಗುವಂತಾಗಲು ನಿಜವಾದ ಸಮಾಜವಾದಿಯೊಬ್ಬ "ತನ್ನ" ದೇಶ ಅತ್ಯಂತ ಮಹಾನ್ ತ್ಯಾಗ ಮಾಡುವಂತೆ ತನ್ನ ಕಾರ್ಯಗಳ ಮೂಲಕ ಸಾಧಿಸಿ ತೋರುತ್ತಾನೆ" ಎಂದಿದ್ದಾರೆ.

(6ನೇ ಪುಟ ನೋಡಿ)

ಇತಿಹಾಸವನ್ನು ಮಬ್ಬುಗೊಳಿಸುವ "ಸಂಶೋಧನೆ"

[5ನೇ ಪುಟದಿಂದ]

ಮುಂದುವರಿದು "ಜಗತ್ತಿನ ಮೇಲೆ ಅಧಿನಾಯಕತ್ವ ಸಾಧಿಸಬೇಕೆನ್ನುವ ಬ್ರಿಟಿಷ್ ಮತ್ತು ಜರ್ಮನ್ ಸಾಮ್ರಾಜ್ಯಶಾಹಿಗಳು "ತಮ್ಮ" ಉದ್ದೇಶ ಸಾಧನೆಗಾಗಿ ಹಲವಾರು ದೇಶಗಳನ್ನು, ಬೆಲ್ಜಿಯಮ್‌ನಿಂದ ಸರ್ಬಿಯಾದಿಂದ ಪಾಲೆಸ್ತೈನ್ ಮತ್ತು ಮೆಸಪೊಟೋಮಿಯಾದವರೆಗೆ ಒಂದಷ್ಟು ದೇಶಗಳನ್ನು ಪೂರ್ಣವಾಗಿ ಹಾಳುಗೆಡವಲು, ಅವುಗಳ ಕತ್ತು ಹಿಸುಕಲು ಕೂಡಾ ಹಿಂಜರಿಯಲಿಲ್ಲ. ಆದರೆ ಸಮಾಜವಾದಿಗಳು "ತಮ್ಮ" ಉದ್ದೇಶ ಸಾಧನೆಗೆ, ಸಮಸ್ತ ಜಗತ್ತಿನ ದುಡಿಯುವ ಜನತೆಯನ್ನು ಬಂಡವಾಳದ ನೊಗದಿಂದ ವಿಮೋಚನೆಗೊಳಿಸುವ ಉದ್ದೇಶಕ್ಕೆ ಸಾರ್ವತ್ರಿಕ ಹಾಗೂ ಶಾಶ್ವತ ಶಾಂತಿಗಳಿಸುವ ಉದ್ದೇಶ ಸಾಧನೆಗೆ ತ್ಯಾಗದ ಅವಶ್ಯಕತೆಯಿಲ್ಲದ ದಾರಿಯೊಂದನ್ನು ಕಂಡುಬರುವವರೆಗೆ ಕಾಯುತ್ತಿರಬೇಕೆ? ಒಂದು ಸುಲಭ ಜಯದ "ಗ್ಯಾರಂಟಿ" ಸಿಗುವವರೆಗೆ ಯುದ್ಧ ಆರಂಭಿಸಲು ಅವರು ಭಯಪಡಬೇಕೆ! "ಅವರ" ಬೂರ್ಜ್ವಾ ವರ್ಗ ಸೃಷ್ಟಿಸಿದ "ಪಿತೃಭೂಮಿ"ಯ ಸಮಗ್ರತೆಯನ್ನು ಮತ್ತು ಭದ್ರತೆಯನ್ನು ಜಾಗತಿಕ ಸಮಾಜವಾದಿ ಕ್ರಾಂತಿಯ ಹಿತಾಸಕ್ತಿಗಳಿಗಿಂತಲೂ ಮಿಗಿಲಾಗಿ ಕಾಣಬೇಕೇ? ಅಂತರ್ರಾಷ್ಟ್ರೀಯ ಸಮಾಜವಾದಿ ಆಂದೋಲನದಲ್ಲಿ ಈ ರೀತಿಯಾಗಿ ಯೋಚಿಸುವ ಪಟಿಂಗರು, ಬೂರ್ಜ್ವಾ ನೈತಿಕತೆಯ ಧೂಳಿನಲ್ಲಿ ಹೊರಳುವ ಚಂಚಾಗಳಿಗೆ ಧಿಕ್ಕಾರ"

ಲೆನಿನ್ ತೋರಿಸಿಕೊಟ್ಟ ಕಾರ್ಯತಂತ್ರದಲ್ಲಿ ಸಂದಿಗ್ಧತೆಯೇನೂ ಇಲ್ಲ "ಆಂಗ್ಲೋ — ಫ್ರೆಂಚ್ ಸೇನೆಗಳು ರಷ್ಯಾದ ಮೇಲೆ ಆಕ್ರಮಣ ನಡೆಸಿದರೆ ಜರ್ಮನ್ ಸಾಮ್ರಾಜ್ಯಶಾಹೀ ರಣಹದ್ದುಗಳೊಂದಿಗೆ ಒಂದು ಕ್ಷಣವೂ ಹಿಂಜರಿಯದೆ ಈ ರೀತಿಯ "ಒಪ್ಪಂದ" ಮಾಡಿಕೊಳ್ಳುತ್ತೇವೆ. ನನ್ನ ಈ ಕಾರ್ಯತಂತ್ರಗಳನ್ನು ರಷ್ಯಾ, ಜರ್ಮನಿ, ಫ್ರಾನ್ಸ್, ಬ್ರಿಟನ್, ಅಮೆರಿಕಾದ–ಸ್ವಲ್ಪದರಲ್ಲಿ ಹೇಳುವುದಾದರೆ ಸಮಸ್ತ ನಾಗರೀಕ ಜಗತ್ತಿನ ವರ್ಗಪ್ರಜ್ಞೆಯುಳ್ಳ ಕಾರ್ಮಿಕವರ್ಗ ಅನುಮೋದಿಸುತ್ತದೆ ಎಂಬುದು ನನಗೆ ಚೆನ್ನಾಗಿ ಗೊತ್ತು. ಇಂತಹ ಕಾರ್ಯತಂತ್ರಗಳು ಸಮಾಜವಾದೀ ಕ್ರಾಂತಿಯ ಧ್ಯೇಯ ಸಾಧನೆಗಳನ್ನು ಸುಲಭಗೊಳಿಸುತ್ತದೆ, ವೇಗ ಹೆಚ್ಚಿಸುತ್ತದೆ, ಅಂತರಾಷ್ಟ್ರೀಯ ಬೂರ್ಜ್ವಾ ವರ್ಗವನ್ನು ದುರ್ಬಲಗೊಳಿಸುತ್ತದೆ, ಬೂರ್ಜ್ವಾ ವರ್ಗವನ್ನು ಸೋಲಿಸುತ್ತಿರುವ ಕಾರ್ಮಿಕ ವರ್ಗದ ಸ್ಥಿತಿಯನ್ನು ಬಲಗೊಳಿಸುತ್ತದೆ"

"ಅಮೆರಿಕನ್ ಜನತೆ ಕೂಡಾ ಸ್ವಾತಂತ್ರ್ಯಕ್ಕಾಗಿ ತಮ್ಮ ಸಂಕಷ್ಟಮಯ ಯುದ್ಧದಲ್ಲಿ ಕೆಲವು ಶೋಷಕರೊಂದಿಗೆ ಇನ್ನು ಕೆಲವು ಶೋಷಕರ ವಿರುದ್ಧ "ಒಪ್ಪಂದಗಳನ್ನು" ಮಾಡಿಕೊಂಡಿದ್ದರು. ಶೋಷಣೆಯ ವಿರುದ್ಧ ಕ್ರಾಂತಿಕಾರೀ ರೀತಿಯಲ್ಲಿ ಹೋರಾಡುತ್ತಿರುವವರನ್ನು ಬಲಗೊಳಿಸುವುದು ಮತ್ತು ಶೋಷಿತ ಜನತೆಯ ಹಿತಾಸಕ್ತಿಗಳನ್ನು ರಕ್ಷಿಸುವುದೇ ಇವುಗಳ ಉದ್ದೇಶವಾಗಿತ್ತು. ಅಮೆರಿಕನ್ ಜನತೆ ಫ್ರೆಂಚ್ ಸ್ಪಾನಿಷ್ ಮತ್ತು ಬ್ರಿಟಿಷರ ನಡುವಿನ ಭಿನ್ನಾಭಿಪ್ರಾಯಗಳ ಲಾಭವನ್ನೂ ಅಮೆರಿಕನ್ ಜನತೆ ಪಡೆದರು. ಕೆಲವೊಮ್ಮೆ ಬ್ರಿಟಿಶ್ ಶೋಷಕರ ವಿರುದ್ಧ ಹೋರಾಡಲು ಫ್ರೆಂಚ್ ಮತ್ತು ಸ್ಪಾನಿಷ್, ಶೋಷಕರ ಜತೆಗೂಡಿದರು ಕೂಡಾ. ಮೊದಲು ಬ್ರಿಟಿಷರನ್ನು ಅವರು ಸೋಲಿಸಿದರು. ನಂತರ ಫ್ರೆಂಚ್‌ರಿಂದ ಮತ್ತು ಸ್ಪಾನಿಷ್‌ನಿಂದ (ಭಾಗಶಃ ಬೆದರಿಸಿ ರಿಯಾಯ್ತಿ ಕೇಳುವ ಮೂಲಕ) ತಮ್ಮನ್ನು ಮುಕ್ತಗೊಳಿಸಿಕೊಂಡರು"

ಜಾಗತಿಕ ಕ್ರಾಂತಿಯ ದಾರಿ ಸುಲಭ ಹಾಗೂ ಸರಳ ಎಂಬ ಭಾವನೆಯನ್ನು ಹೋಗಲಾಡಿಸುತ್ತಾ ಲೆನಿನ್ ಹೇಳಿದ ಮಾತುಗಳಿವು—"ಕಾರ್ಮಿಕ ಕ್ರಾಂತಿ ಸುಲಭವಾಗಿ, ಸುಲಲಿತವಾಗಿ ನಡೆಯುತ್ತಿದ್ದರೆ ಮಾತ್ರ, ಮೊದಲಿನಿಂದಲೂ ಬೇರೆ ಬೇರೆ ದೇಶಗಳ ಕಾರ್ಮಿಕ ವರ್ಗ ಜತೆಗೂಡಿ ಕಾರ್ಯಾಚರಣೆ ನಡೆಸಿದರೆ ಮಾತ್ರ, ಸೋಲುಗಳು ಬರಲಾರವು ಎಂಬ ಗ್ಯಾರಂಟಿಯಿದ್ದರೆ ಮಾತ್ರ, ವಿಜಯದತ್ತ ಸಾಗುವಾಗ ಭಾರೀ ಕಷ್ಟ-ನಷ್ಟ ಅನುಭವಿಸುವ ಅವಶ್ಯಕತೆ ಅಥವಾ "ಮುತ್ತಿಗೆಗೊಳಗಾದ ಕೋಟೆಗಳಲ್ಲಿ ಸರಿಯಾದ ಸಮಯಕ್ಕೆ ಕಾಯುವ ಅಥವಾ ಅಗಲ ಕಿರಿದಾದ, ದಾಟಲಾಗದ ಅಪಾಯಕಾರೀ ತಿರುವುಗಳಿಂದ ಕೂಡಿದ ಗುಡ್ಡ ಪರ್ವತ ಶ್ರೇಣಿಗಳ ಮೂಲಕ ಹಾದುಹೋಗಬೇಕಾಗಿ ಬರಲಾರದು ಎಂದಿದ್ದರೆ ಮಾತ್ರ, ಈ ಕಾರ್ಯ "ಶರ್ತ"ದ ಮೇಲೆ ಮಾತ್ರ ತಾನು ಕಾರ್ಮಿಕ ವರ್ಗದ ಕ್ರಾಂತಿಗೆ 'ಒಪ್ಪುತ್ತೇನೆ' ಇಲ್ಲವಾದರೆ 'ಇಲ್ಲ' ಎಂದು ಯಾವ ಕ್ರಾಂತಿಕಾರಿಯೂ ಹೇಳಲಾರ. ಹೀಗೆ ಹೇಳುವವರು ಯಾರಾದರೂ ಇದ್ದರೆ ಆತ ಕ್ರಾಂತಿಕಾರಿಯಲ್ಲ. ಆತ ಬೂರ್ಜ್ವಾ ಬುದ್ಧಿಜೀವಿಗಳ ಒಣ ಪಾಂಡಿತ್ಯದಿಂದ ಮುಕ್ತನಾಗಿಲ್ಲ, ಇಂತಹ ವ್ಯಕ್ತಿ ಯಾವಾಗಲೂ ನಮ್ಮ ಸಮಾಜವಾದೀ – ಕ್ರಾಂತಿಕಾರಿಗಳಂತೆ ಮೆನ್ಷೆವಿಕ್‌ರಂತೆ, (ಅಪರೂಪವಾಗಿಯಾದರೂ) ಎಡ ಸಮಾಜವಾದೀ ಕ್ರಾಂತಿಕಾರಿಗಳಂತೆ ಪ್ರತಿ ಕ್ರಾಂತಿಕಾರಿ ಬೂರ್ಜ್ವಾಗಳ ಪಾಳೆಯದೊಳಗೆ ಜಾರಿಕೊಳ್ಳುತ್ತಾನೆ."

ಜಗತ್ತಿನಲ್ಲಿ ಉದಯಿಸುತ್ತಿದ್ದ ನಾಝೀವಾದ ಮತ್ತು ಫ್ಯಾಸಿಸಂನ ಭೂತವನ್ನು ಹೊಡೆದೋಡಿಸಲು ಒಂದು ಫ್ಯಾಸಿಸ್ಟ್ ವಿರೋಧಿ ಮಿತ್ರಕೂಟ ರೂಪಿಸಿಕೊಳ್ಳುವಂತೆ ಐದು ವರ್ಷಗಳ ಕಾಲ ಬ್ರಿಟಿಷ್, ಫ್ರೆಂಚ್ ಮತ್ತು ಇತರ ಸಾಮ್ರಾಜ್ಯಶಾಹಿ ದೇಶಗಳನ್ನು ಒಪ್ಪಿಸುವ ಸತತ ಪ್ರಯತ್ನಗಳು ವಿಫಲವಾದ ಮೇಲಷ್ಟೇ ಸಮಾಜವಾದದ ರಕ್ಷಣೆಗಾಗಿ ಲೆನಿನ್ ತೋರಿಸಿಕೊಟ್ಟ ನೀತಿಗಳಿಗನುಸಾರವಾಗಿಯೇ ಸ್ಟಾಲಿನ್ ಅನಾಕ್ರಮಣ ಸಂಧಿ ಮಾಡಿಕೊಂಡರು.

ಪೂರ್ವಾಗ್ರಹ ಮತ್ತು ಅಜ್ಞಾನ

ಆದ್ದರಿಂದ ಈ ವಿಷಯವನ್ನು ಹಗುರವಾಗಿ ಕಾಣುವ ಅರುಣ್ ಶೌರಿಯ ಬರವಣಿಗೆ ವಾಸ್ತವತೆಗೆ ತೀರಾ ವ್ಯತಿರಿಕ್ತವಾಗದೆ. ಭಾರತದ ರಾಷ್ಟ್ರೀಯ ಆಂದೋಲನದ ಕಮ್ಯುನಿಸ್ಟ್ ಮತ್ತು ಬೂರ್ಜ್ವಾ ಮುಂದಾಳುಗಳು ಇದನ್ನು ಹೇಗೆ ಪರಿಗಣಿಸಿದ್ದರು ಎಂಬುದನ್ನು ಸಂಪೂರ್ಣವಾಗಿ ಕಡೆಗಣಿಸಿ ಆತ ತನ್ನ ಏಕ್‌ದಂ ಕಮ್ಯುನಿಸ್ಟ್ ವಿರೋಧಿ ಪೂರ್ವಾಗ್ರಹವನ್ನು ತೋರ್ಪಡಿಸಿಕೊಂಡಿದ್ದಾರೆ.

1942 ರ ಘಟನೆಗಳನ್ನು ಮೇಲೆ ಸ್ಥೂಲವಾಗಿ ಹೇಳಿದ ಚಾರಿತ್ರಿಕ ಬೆಳವಣಿಗೆಗಳ ಚೌಕಟ್ಟಿನ ಹೊರಗೆ ಸರಿಯಾದ ರೀತಿಯಲ್ಲಿ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಚಾರಿತ್ರಿಕ ಪ್ರವೃತ್ತಿಗಳು ಮತ್ತು ವರ್ಗ ವಾಸ್ತವತೆಗಳ ಬಗ್ಗೆ ಸಾಕಷ್ಟು ಜ್ಞಾನವಿಲ್ಲದಿರುವಾಗ ಯಾವುದೇ ಘಟನೆಯನ್ನು ಕೆಲವು ವ್ಯಕ್ತಿಗಳ ಮಟ್ಟಕ್ಕಷ್ಟೇ ಇಳಿಸಿಬಿಡಲಾಗುತ್ತದೆ. ಕೆಲವು ವ್ಯಕ್ತಿಗಳ ಮತ್ತು ಗುಂಪುಗಳ ಮಾನಸಿಕ ಉದ್ದೇಶಗಳ ಕ್ಷುಲ್ಲಕ ವಾದ—ವಿವಾದಗಳಲ್ಲಿ ಚಾರಿತ್ರಿಕ ಪ್ರವೃತ್ತಿಗಳನ್ನು ಮುಸುಕಾಗಿ ಬಿಡುತ್ತವೆ. ಇಂತಹ 'ಏಕಾಕಿ ಸಂಶೋಧನೆ'ಯ ಪ್ರಕ್ರಿಯೆಯಲ್ಲಿ ಪ್ರಾಮಾಣಿಕ ಇತಿಹಾಸ, ವರ್ಗಗಳ, ದೇಶಗಳ ಮತ್ತು ಆಂದೋಲನಗಳ ಇತಿಹಾಸ ಪರಿಚಯವೇ ಸಿಗದಷ್ಟು ಮಬ್ಬಾಗುತ್ತದೆ. ○

ರಾಜ್ಯಾದ್ಯಂತ ಬಡ ಮಕ್ಕಳಿಗಾಗಿ ರಾತ್ರಿ ಶಾಲೆಗಳನ್ನು ನಡೆಸಲು ಡಿ. ವೈ. ಎಫ್. ಐ. ನಿರ್ಧಾರ

1984ಜೂ. 9-10ರಂದು ಮೈಸೂರಿನಲ್ಲಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ ಕರ್ನಾಟಕ ರಾಜ್ಯ ಸಮಿತಿಯ ಸಭೆ ನಡೆಯಿತು. ಕಳೆದ ರಾಜ್ಯ ಸಮಿತಿಯಿಂದ ನಡೆದ ಎಲ್ಲಾ ಚಟುವಟಿಕೆಗಳನ್ನು ವಿಮರ್ಶಿಸಿದ ಸಭೆಯು ಈ ಕೆಳ ಕಂಡಂತೆ ತೀರ್ಮಾನಿಸಿದೆ.

ಎಲ್ಲಾ ಜಿಲ್ಲಾ ಸಮಿತಿಗಳು ಈ ತಿಂಗಳು 15 ರಿಂದ ಜುಲೈ 30 ರೊಳಗೆ ಸದಸ್ಯತ್ವವನ್ನು ನೊಂದಾಯಿಸಿ ಮುಗಿಸಬೇಕೆಂದು ಕೋರಲಾಗಿದೆ. ಈ ಅವಧಿಯ ನಂತರ ನೊಂದಾಯಿಸಬಾರದೆಂದು ತೀರ್ಮಾನಿಸಿದೆ. ಅಗಸ್ಟ್‌ನಿಂದ ಡಿಸೆಂಬರ್ 1984 ರೊಳಗೆ ಎಲ್ಲಾ ಜಿಲ್ಲಾ ಸಮ್ಮೇಳನಗಳನ್ನು ನಡೆಸಬೇಕು.

ವಿಧವೆ, ವೃದ್ಧ ಹಾಗೂ ಅಂಗವಿಕಲರಿಗಾಗಿ ಇರುವ ಸರ್ಕಾರದ ಯೋಜನೆಯ ಪ್ರಯೋಜನ ಸಂಬಂಧಪಟ್ಟವರನ್ನು ಡಿ.ವೈ.ಎಫ್.ಐ ಸಂಗಾತಿಗಳು ಸಂಪರ್ಕಿಸಿ ಅವರಿಗೆ ಸಹಾಯ ಮಾಡುವುದು, ವಯಸ್ಕರ ಶಿಕ್ಷಣ ಹಾಗೂ ಬಡಮಕ್ಕಳಿಗಾಗಿ ರಾತ್ರಿಯ ಪಾಠ ಶಾಲೆಗಳನ್ನು ಸಂಘಟಿಸಬೇಕು. ಸರಳ, ವಿಧವಾ ಮತ್ತು ಅಂತರ್ ಜಾತೀಯ ವಿವಾಹಗಳಿಗೆ ಪ್ರೋತ್ಸಾಹಿಸಬೇಕು.

ಎಲ್ಲಾ ಜಿಲ್ಲಾ ತಾಲ್ಲೂಕ್ ಸಮಿತಿಗಳು ಕ್ರೀಡಾ ಟೂರ್ನಮೆಂಟ್ ಮತ್ತು ಪ್ರಗತಿ ಪರ ಸಾಂಸ್ಕೃತಿಕ [ಬೀದಿ ನಾಟಕ ಹಾಡುಗಳ ತಂಡಗಳು] ತಂಡಗಳನ್ನು ರಚಿಸಲು ಕಾರ್ಯಕ್ರಮ ಹಮ್ಮಿಕೊಳ್ಳಬೇಕು. ರಾಜ್ಯ ಮಟ್ಟದಲ್ಲಿ ಪೇಯಿಂಟರ್ಸ್ ಸಂಘಟನೆಯನ್ನು ಸ್ಥಾಪಿಸಬೇಕೆಂದು ತೀರ್ಮಾನಿಸಲಾಗಿದೆ. ಆದರಂತೆ. ಆಯಾ ಜಿಲ್ಲಾ ಘಟಕಗಳು ತಮ್ಮ ಸಂಪರ್ಕದಲ್ಲಿರುವ ಪೇಯಿಂಟರ್ಸ್‌ಗಳ ವಿವರಗಳೂ ವಿಳಾಸಗಳನ್ನು ತಕ್ಷಣ ರಾಜ್ಯ ಸಮಿತಿಗೆ ಕಳುಹಿಸಬೇಕೆಂದು ರಾಜ್ಯ ಸಮಿತಿ ಕಾರ್ಯದರ್ಶಿ ಎಲ್. ಶಿವರಾಂ ತಿಳಿಸಿದ್ದಾರೆ.

ಪ್ರೆಸ್ ಕಾರ್ಮಿಕರ ಬೇಡಿಕೆಗಳ ಒಪ್ಪಂದ

ಎಸ್. ಕೆ. ಪ್ರೆಸ್ ವರ್ಕರ್ಸ್ ಯೂನಿಯನ್ ಮತ್ತು ಮಾಸ್ಟರ್ ಪ್ರಿಂಟರ್ಸ್ ಅಸೋಸಿಯೇಶನ್ ಇವರ ನಡುವೆ ನಡೆದ ವೇತನ ಹೆಚ್ಚಳದ ಒಪ್ಪಂದದಂತೆ 1984 ನೇ ಏಪ್ರಿಲ್ 1 ರಿಂದ ಶೇಕಡಾ 16, 1985 ನೇ ಏಪ್ರಿಲ್‌ನಿಂದ ಶೇಕಡಾ 11 ಮತ್ತು 1986 ನೇ ಏಪ್ರಿಲ್ ಒಂದರಿಂದ ಶೇಕಡಾ 12 ರಂತೆ ವೇತನವು ಹೆಚ್ಚಳವಾಗಿದೆ.

ಈ ವೇತನ ಹೆಚ್ಚಳದ ಒಪ್ಪಂದಕ್ಕೆ ಎಸ್. ಕೆ. ಪ್ರೆಸ್ ವರ್ಕರ್ಸ್ ಯೂನಿಯನಿನ ಹಾಗೂ ಮಾಸ್ಟರ್ ಪ್ರಿಂಟರ್ಸ್ ಅಸೋಸಿಯೇಶನಿನ ಪ್ರತಿನಿಧಿಗಳು ಮಂಗಳೂರಿನ ಅಸಿಸ್ಟೆಂಟ್ ಲೇಬರ್ ಕಮಿಷನರ್ ಇವರ ಸಮ್ಮುಖದಲ್ಲಿ ತಾ॥ 31-5-1984 ರಂದು ಸಹಿ ಮಾಡಿದರು.

ಕಳೆದ ಮೂರು ವರ್ಷಗಳ ಅವಧಿಯಲ್ಲಿ ಪ್ರೆಸ್ ಕಾರ್ಮಿಕರಿಗೆ ಅವರ ವೇತನದಲ್ಲಿ ಶೇಕಡಾ 39 ರಂತೆ ವೇತನವು ಹೆಚ್ಚಳವಾಗುವುದು. ಜಿಲ್ಲೆಯ ಎಲ್ಲಾ ಅಸಂಘಟಿತ ಪ್ರೆಸ್ ಕಾರ್ಮಿಕರು ಸಿಐಟಿಯು ನ ನೇತೃತ್ವದಲ್ಲಿರುವ ಎಸ್. ಕೆ. ಪ್ರೆಸ್ ವರ್ಕರ್ಸ್ ಯೂನಿಯನಿನ ಸದಸ್ಯರಾಗಿ ಈ ವೇತನ ಹೆಚ್ಚಳದ ಪ್ರಯೋಜನ ಪಡೆಯಲು ಮುಂದಾಗಬೇಕೆಂದು ಸಂಘದ ಕಾರ್ಯದರ್ಶಿ ಬಿ. ಉಮಾನಾಥರು ವಿನಂತಿಸಿದ್ದಾರೆ.

ಬೆಳ್ತಂಗಡಿ ಸರ್ಕಾರಿ ಜೂನಿಯರ್ ಕಾಲೇಜ್ ಹಗರಣ: ತನಿಖೆಗೆ ಆಜ್ಞೆ

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿಯ ಸರ್ಕಾರಿ ಕಿರಿಯ ಕಾಲೇಜಿನಲ್ಲಿ 1983-84 ನೇ ಸಾಲಿನ ಪ್ರಥಮ ಪಿ. ಯು. ಸಿ. ವಾರ್ಷಿಕ ಪರೀಕ್ಷೆಯಲ್ಲಿ ಕೆಲವು ಪ್ರತಿಭಾವಂತ ವಿದ್ಯಾರ್ಥಿಗಳನ್ನು ಕೆಲವು ಅಧ್ಯಾಪಕರು ದುರುದ್ದೇಶ ಪೂರ್ವಕವಾಗಿ ಅನುತ್ತೀರ್ಣಗೊಳಿಸಿದ್ದನ್ನು ಎಸ್. ಎಫ್. ಐ. ನ ರಾಜ್ಯ ಸಮಿತಿಯು ಪ್ರತಿಭಟಿಸಿತ್ತು. ಈಗ ಪದವಿಪೂರ್ವ ಶಿಕ್ಷಣ ಮಂಡಳಿಯ ನಿರ್ದೇಶಕರು ಈ ಪ್ರಕರಣದ ಬಗ್ಗೆ ತನಿಖೆಗೆ ಅಜ್ಞೆ ಮಾಡಿದ್ದಾರೆ.

ನಿರ್ದೇಶಕರ ಈ ಕ್ರಮವನ್ನು ಎಸ್. ಎಫ್. ಐ. ನ ಪ್ರಧಾನ ಕಾರ್ಯದರ್ಶಿ ಎಸ್. ಆರ್. ಆರಾಧ್ಯರವರು ಅಭಿನಂದಿಸಿ ತನಿಖೆಯು ನಿಷ್ಪಕ್ಷಪಾತವಾಗಿ ನಡೆಯುವಂತೆ ಎಚ್ಚರಿಕೆ ವಹಿಸಿ ನೊಂದ ವಿದ್ಯಾರ್ಥಿಗಳಿಗೆ ನ್ಯಾಯ ದೊರಕಿಸಿ ಕೊಡಬೇಕೆಂದು ಕೇಳಿಕೊಂಡಿದ್ದಾರೆ.

ಬಡ ವಿದ್ಯಾರ್ಥಿಗಳಿಗೆ ಪುಸ್ತಕ ವಿತರಣೆ

ಪದವು ಪ್ರದೇಶ ಬೀಡಿ ಕೆಲಸಗಾರರ ಸಂಘದ (ಸಿ. ಐ. ಟಿ. ಯು.) ವತಿಯಿಂದ ಬೊಂದೆಂತಿಲ ಸ್ಟೆಂಟ್ ಥೋಮಸ್ ಹಾಯರ್ ಪ್ರೈಮರಿ ಶಾಲೆಯ ಬಡ ವಿದ್ಯಾರ್ಥಿಗಳಿಗೆ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀಯುತ ಎ. ಡಿ ಸೋಜರವರ ಸಮಕ್ಷಮದಲ್ಲಿ ಸಂಘದ ಕಾರ್ಯದರ್ಶಿ ಶ್ರೀ ಕೆ. ಬಾಬು ದೇವಾಡಿಗರು ಪುಸ್ತಕಗಳನ್ನು ವಿತರಿಸಿದರು. ಸಂಘದ ಜತೆ ಕಾರ್ಯದರ್ಶಿ ಶ್ರೀಮತಿ ಯಮುನ ಸಾಲ್ಯಾನ್ ಸಮಿತಿ ಸದಸ್ಯರಾದ ಶ್ರೀ ಚಂದ್ರಹಾಸ, ಶ್ರೀಮತಿ ಗಿರಿಜ, ಕುಮಾರಿ ವೇದಾವತಿ ಕುಮಾರಿ ನಾಗಮ್ಮ, ಉಷಾ ಮೊದಲಾದವರು ಹಾಜರಿದ್ದರು.

ಮುಸುಕಿನ ಮರೆಯಲ್ಲಿ ಜೀವಂತವಿರುವ ಡಾಂಗೇ ವಾದ

[3ನೇ ಪುಟದಿಂದ]

ಹೆಸರಿನಲ್ಲಿ ಜಿ. ರಾಮಕೃಷ್ಣ ಮತ್ತಿತರ ಗೆಳೆಯರಿಗೆ ಡಾಂಗೆ ಎಂಬ ಒಬ್ಬ ಮನುಷ್ಯನನ್ನು ದೂಷಿಸಿ ಮತ್ತೆ ಅವರ ವಿಚಾರಕ್ಕೆ ಅಂಟಿಕೊಳ್ಳುವುದು ಬಹಳ ಅನುಕೂಲಕರವಾಗಿರಬಹುದು. ಆದರೆ ನಾವು ಇವೆಲ್ಲಕ್ಕೂ ಡಾಂಗೆ ಎಂಬ ಒಬ್ಬ ಮನುಷ್ಯನನ್ನು ಮಾತ್ರವೇ ದೂಷಿಸುವುದಿಲ್ಲ.

1964 ರಲ್ಲಿ ಮಾರ್ಕ್ಸ್‌ವಾದಿಗಳು ಸಿಪಿಐ ನಿಂದ ಹೊರ ಬಂದಿದ್ದು ಸುಮ್ಮನೆ ಅಲ್ಲ. ಸರಿಯಾದ ಕಾರ್ಯಕ್ರಮ ರೂಪಿಸಲು ನಡೆದ ಹೋರಾಟ ಸಿಪಿಐ(ಎಂ) ಅನ್ನು ಸಂಘಟಿಸುವುದಕ್ಕೆ ಕಾರಣವಾಗಿತ್ತು. ಎಲ್ಲಿಯವರೆಗೆ ರಾಷ್ಟ್ರೀಯ ಪ್ರಜಾಪ್ರಭುತ್ವ ರಂಗದ (ಎನ್.ಡಿ.ಎಫ್.) ಕಾರ್ಯಕ್ರಮವೇ ಸಿಪಿಐ ನ ಕಾರ್ಯಕ್ರಮವಾಗಿರುತ್ತದೆಯೋ, ಎಲ್ಲಿಯವರೆಗೆ ರಾಷ್ಟ್ರೀಯ ಪ್ರಜಾಪ್ರಭುತ್ವ ರಂಗ ಎಂದರೆ "ಪ್ರಗತಿಪರ" ರಾಷ್ಟ್ರೀಯ ಬಂಡವಾಳಶಾಹಿ ವರ್ಗದೊಡನೆ ಅಧಿಕಾರವನ್ನು ಹಂಚಿಕೊಳ್ಳುವುದು ಎಂದು ಅರ್ಥವಾಗುತ್ತದೆಯೋ ಅಲ್ಲಿಯವರೆಗೆ ಜಿ. ರಾಮಕೃಷ್ಣ ರಂಥಹ ಆಲೋಚನೆಗಳನ್ನು ತಡೆಯುವುದು ಅಗತ್ಯ. ಎ.ಕೆ.ಜಿ. ಯವರು ಮುಂದೆ ನಿಂತು ಹೋರಾಡಿದ್ದು ಇಂತಹ ಕಾರ್ಯಕ್ರಮದ ವಿರುದ್ಧ. ಅದು ಜಿ. ರಾಮಕೃಷ್ಣರ ತಿಳುವಳಿಕೆಯಂತೆ ಎ.ಕೆ.ಜಿ. ಯವರ ಸೈದ್ಧಾಂತಿಕ ಜ್ಞಾನದ ಕೊರತೆಯಲ್ಲ. ಇಂತಹ ತಪ್ಪು ತಿಳುವಳಿಕೆಯಿಂದಲೇ ಜಿ. ರಾಮಕೃಷ್ಣರು ತಮ್ಮ ಏಕಮಾತ್ರ ಕಾರ್ಯಕ್ರಮ ಬಿ.ಜೆ.ಪಿ. ವಿರೋಧ ಎಂದು ತಿಳಿದಿರುವುದು. ನಿಜ ಸಂಗತಿಯೆಂದರೆ ಕೇರಳದಲ್ಲಿ ಆರ್.ಎಸ್.ಎಸ್. ಧಾಳಿಯನ್ನು ಹೆಚ್ಚಾಗಿ ಹೊತ್ತಿರುವುದು ಕೂಡಾ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷವೇ? ಧರ್ಮಾಂಧತೆಯ ಬಗ್ಗೆ ನಮ್ಮ ವಿರೋಧ ಇಂದಿರಾಗಾಂಧಿಯ ಪರ ಪ್ರಚಾರ ಮಾಡುವ ದಾರಿಗೆ ನಮ್ಮನ್ನು ತಳ್ಳಿಲ್ಲ. ಜನತಾ ಪಕ್ಷದೊಡನೆ ನಮ್ಮ ಒಪ್ಪಂದ ಚಾರಿತ್ರಿಕವಾಗಿ ಅವರ ಸರ್ವಾಧಿಕಾರದ ವಿರುದ್ಧ ಹೋರಾಡಬಲ್ಲ ಸ್ಥಿತಿಯಲ್ಲಿದ್ದಾರೆ ಎಂಬ ತಿಳುವಳಿಕೆಯಿಂದ ಹುಟ್ಟಿಕೊಂಡಿತ್ತು.

ಕಾಂಗ್ರೆಸ್(ಐ), ನಮ್ಮ ಮೇಲೆ ಧಾಳಿ ಮಾಡುತ್ತಿದ್ದಾಗ ಡಾಂಗೆ ವಾದಿಗಳೂ ಸೇರಿ ಎಲರೂ ಖುಷಿಪಟ್ಟರು. ಮಾರ್ಕ್ಸ್‌ವಾದಿಗಳು ಅವರ ಧಾಳಿಗೆ ತುತ್ತಾದಾಗ ಅವರ ಆತ್ಮಸಾಕ್ಷಿಯನ್ನು ಅದು ಯಾವ ರೀತಿಯಲ್ಲಿಯೂ ಬಾಧಿಸಲಿಲ್ಲ. ಆದರೆ ಇಂದಿರಾಗಾಂಧಿ ಬಂಡವಾಳಶಾಹಿ– ಭೂ ಮಾಲೀಕ ವರ್ಗಗಳ ಪಕ್ಷಗಳ ಮೇಲೆಯೇ ಧಾಳಿ ಆರಂಭಿಸಿದಾಗ ಆ ಪಕ್ಷಗಳು ಇಂದಿರಾ ಗಾಂಧಿಯನ್ನು 1973-74 ರಲ್ಲಿ ಮೊದಲು ಗುಜರಾತಿನಲ್ಲಿ, ನಂತರ ಬಿಹಾರದಲ್ಲಿ ಎದುರಿಸಿ ನಿಂತವು. ಕೊನೆಗೆ ಇಡೀ ದೇಶದಲ್ಲಿ ಬಹಿರಂಗವಾಗಿ ಆಕೆಯ ವಿರುದ್ಧ ಸೆಣಸಿದವು. ಜನರನ್ನು ತಮ್ಮ ಜೊತೆಗೆ ಸೆಳೆದುಕೊಳ್ಳಲು "ಪ್ರಜಾಸತ್ತೆ" ಯ ಪ್ರಶ್ನೆಯನ್ನು ಎತ್ತಿದುವು. ಮೊದಲು ಈ ಪಕ್ಷಗಳು ಇಂದಿರಾ ಗಾಂಧಿಯ ಸರ್ವಾಧಿಕಾರಿ ನೀತಿಯನ್ನು "ಕಮ್ಯೂನಿಸಂ" ಶ್ರಮಿಕ ವರ್ಗದ ಸರ್ವಾಧಿಕಾರದ ಜೊತೆಯಲ್ಲಿ ಗುರುತಿಸಿದುವು. ಡಾಂಗೆ ಮತ್ತು ಅವರ ಗುರುಗಳು ಹೇಳಿದ್ದು ಇದನ್ನೇ ಅಲ್ಲವೆ?

ಇಂದಿರಾ ಗಾಂಧಿಯ ಪ್ರಗತಿ ಪರತೆಯ ಮುಖವಾಡವನ್ನು, ಸಮಾಜವಾದೀ ಮೋಸದ-ಜಾಲದ ಮುಖವಾಡವನ್ನು ಹರಿದೊಗೆದ ಕೀರ್ತಿ, ಅವಳಲ್ಲಿ ಬೆಳೆಯುತ್ತಿದ್ದ ಫ್ಯಾಸಿಸ್ಟ್ ಮನೋವೃತ್ತಿಯನ್ನು ಬಯಲಿಗೆಳೆದ ಕೀರ್ತಿ ಕೂಡ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷಕ್ಕೆ ಸಲ್ಲಬೇಕು.

ಬಂಡವಾಳಶಾಹಿ ಭೂಮಾಲೀಕ ವಿರೋಧಿ ಪಕ್ಷಗಳು ಇದೇ ವರ್ಗಕ್ಕೆ ಸೇರಿದ್ದರೂ ಸರ್ವಾಧಿಕಾರಿ ವಿರೋಧದ ಬಗ್ಗೆ ಪ್ರಾಮಾಣಿಕವಾಗಿದ್ದುವು. 1959 ರಲ್ಲಿಯೇ ಸಿ. ರಾಜಗೋಪಾಲಾಚಾರಿಯರು ಕಮ್ಯೂನಿಸ್ಟ್ ಸರ್ಕಾರವನ್ನು ಕಿತ್ತೊಗೆದ ನೆಹರೂರವರ ಕೃತ್ಯದ ಬಗ್ಗೆ ಭಿನ್ನಮತ ತೋರಲು ಹಿಂದೆ ಮುಂದೆ ನೋಡಲಿಲ್ಲ. ಬಂಡವಾಳಶಾಹಿ-ಭೂ ಮಾಲೀಕ ಪಕ್ಷಗಳು ಪ್ರಜಾಪ್ರಭುತ್ವಕ್ಕಾಗಿ ನಡೆಸುತ್ತಿದ್ದ ಚಳುವಳಿ ಸ್ವತಃ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಬೆಳವಣಿಗೆಗೆ ಪ್ರಯೋಜನಕಾರಿಯಾಗಿತ್ತು. ಆಳುವ ವರ್ಗಗಳು ವಿವಿಧ ವಿಭಾಗಗಳ ಮಧ್ಯದಲ್ಲಿ ಇರುವ ಭಿನ್ನತೆಗಳ, ಅವು ಎಷ್ಟೊ ಸಣ್ಣದಿರಲಿ, ಅವುಗಳ ಪ್ರಾಮುಖ್ಯತೆಯನ್ನು ಕಡೆಗಣಿಸುವ ಈ ಭಿನ್ನತೆಗಳ ಪ್ರಯೋಜನ ಪಡೆಯುವುದರಲ್ಲಿ ಹಿಂದೆ ಬೀಳುವ ಲೆನಿನ್‌ವಾದಿಯಾಗಲು ಸಾಧ್ಯವಿಲ್ಲ.

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಈ ಭಿನ್ನತೆಗಳನ್ನು ಜನತೆಯ ಮತ್ತು ಪ್ರಜಾಪ್ರಭುತ್ವದ ಚಳುವಳಿಯನ್ನು ಬೆಳೆಸುವುದಕ್ಕೆ ಯಶಸ್ವಿಯಾಗಿ ಬಳಸಿಕೊಂಡಿದೆ. ಡಾಂಗೆವಾದೀ ನಾಯಕತ್ವ ತಪ್ಪು ಮಾಡಿದ್ದು ಮತ್ತು ಸಿಪಿಐ ಅನ್ನು ಹಳ್ಳಕ್ಕೆ ನೂಕಿದ್ದು ಇಲ್ಲಿಯೇ? ಜಿ. ರಾಮಕೃಷ್ಣರು ಅವಸಾನ ಹೊಂದುತ್ತಿರುವ ಸಿಪಿಐ ನ ಈ ವಾದವನ್ನೇ ಬೆಳೆಸಲು ಪ್ರಯತ್ನ ಪಡುತ್ತಿದ್ದಾರೆ.

ಪ್ರಜಾಪ್ರಭುತ್ವಕ್ಕಾಗಿ ಚಳುವಳಿ ಎಂದಾಗ ಜಿ. ರಾಮಕೃಷ್ಣರವರು ಅರ್ಥ ಮಾಡಿಕೊಂಡಂತೆ ತಕ್ಷಣವೇ ಸಮಾಜವಾದಿ ಪ್ರಜಾಪ್ರಭುತ್ವಕ್ಕಾಗಿ ಮಾಡುವ ಹೋರಾಟವಲ್ಲ. ತುರ್ತು ಪರಿಸ್ಥಿತಿಯ ಮೂಲಕ ಇಂದಿರಾ ತರಬಯಸಿದ್ದು ಸಮಾಜವಾದಿ ಪ್ರಜಾಪ್ರಭುತ್ವವನ್ನೇ ಏನು? ಡಾಂಗೆ ಹಾಗೆಯೇ ತಿಳಿದುಕೊಂಡರು. ಆದ್ದರಿಂದಲೇ ಅವರು ಕಾರ್ಮಿಕ ವರ್ಗ ಬೋನಸ್ ಕಳೆದುಕೊಳ್ಳುವುದರಿಂದ ಆಗುವ ನಷ್ಟಕ್ಕೆ ತುರ್ತು ಪರಿಸ್ಥಿತಿಯ ಲಾಭಗಳು ಅನೇಕ ಪಟ್ಟು ಮಿಗಿಲಾಗುತ್ತವೆ ಎಂಬ ವಾದ ಹುಟ್ಟಿದ್ದು ಈ ರೀತಿಯ ಯೋಚನೆಯಿಂದಲೇ? ಈ ಜನ ಇಂದಿರಾ ಗಾಂಧಿ "ಬಲಪಂಥಿ"ಯರನ್ನು ದಮನ ಮಾಡಲೆತ್ನಿಸಿದ್ದು ಕ್ರಾಂತಿಕಾರಿ ಕ್ರಮವೆಂದು ಬಗೆದರು. ಆದರೆ ಇಂದಿರಾ, ಅಕ್ಟೋಬರ್ 76 ರ ನಂತರ ಸಿಪಿಐ ಮೇಲೆಯೇ ಧಾಳಿ ಮಾಡಿದಾಗ ಅವರಿಗೆ ಜ್ಞಾನೋದಯವಾಯಿತು. ಅಲ್ಲಿಯವರೆಗೂ ಪ್ರಯೋಜನಕಾರಿ ಎಂದು ಕಂಡಿದ್ದ ತುರ್ತು ಪರಿಸ್ಥಿತಿಯ ಕರಾಳ ಮುಖಗಳು ಆಗ ಕಾಣಲಾರಂಭಿಸಿದುವು.

ಮಾರ್ಕ್ಸ್‌ವಾದಿಗಳಾದ ನಮಗೆ ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಣೆ ಮತ್ತು ವಿಸ್ತರಣೆ ಎಂದರೆ ಜನರು ತಮ್ಮ ಸಂಘಟನೆಯನ್ನು ಬೆಳೆಸುವುದಕ್ಕೆ ತಮ್ಮ ಹೋರಾಟಗಳನ್ನು ನಡೆಸುವುದಕ್ಕೆ ವರ್ಗಶಕ್ತಿಗಳ ಹೊಂದಾಣಿಕೆಯನ್ನು ಮುರಿಯುವ ಹೋರಾಟದ ಮುಂದುವರಿಕೆಗೆ ಒಟ್ಟಿನಲ್ಲಿ ಕ್ರಾಂತಿಕಾರಿ ಪಕ್ಷದ ಸಂಗ್ರಾಮ. ಕ್ರಾಂತಿಕಾರಿ ವರ್ಗಗಳನ್ನು ಸಂಘಟಿಸದೇ ಅವರ ದಿನ ದಿನದ ಹೋರಾಟಗಳನ್ನು ನಡೆಸದೆ, ಆಳುವ ವರ್ಗಗಳ ವರ್ಗ ಗುಣವನ್ನು ಸ್ವಂತ ಅನುಭವದಿಂದ ಅರಿತುಕೊಳ್ಳದೆ, ಜನರ ಸಂಘಟನೆಯನ್ನು ಆಳುವ ವರ್ಗಗಳಿಗೆ ಎದುರಾಗಿ ನಿಲ್ಲಿಸದೆ, ಆಳುವ ವರ್ಗಗಳನ್ನು ಸೋಲಿಸದೇ ಕ್ರಾಂತಿಕಾರಿ ಬದಲಾವಣೆ ಸಾಧ್ಯವಿಲ್ಲ. ಈ ಕೆಲಸಗಳಿಗಾಗಿಯೇ ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಣೆ ಮತ್ತು ಬದಲಾವಣೆ ನಮಗೆ ಬೇಕಾಗಿರುವುದು. ನಮ್ಮ ತಿಳುವಳಿಕೆಯಂತೆ ಜನಗಳ ಮಧ್ಯದಲ್ಲಿ ಧೃಢವಾದ ಬೇರನ್ನಿಳಿಸಿ, ಅವರ ಆಸೆ, ಆಕಾಂಕ್ಷೆಗಳಿಗೆ ಸ್ಪಂದಿಸಿ ಅವರ ಪ್ರತಿಜ್ಞೆಯನ್ನು ಎತ್ತರಕ್ಕೆ ಕೊಂಡಯ್ಯದೆ, ಕ್ರಾಂತಿಕಾರಿ ಬದಲಾವಣೆ ಸಾಧ್ಯವಿಲ್ಲ. ಆಳುವ ವರ್ಗಗಳು ಸರಿಯಾದ ನೀತಿಯನ್ನು ಅನುಸರಿಸುತ್ತವೆ ಅಥವಾ ಸಾಮ್ರಾಜ್ಯಶಾಹಿಗಳ ವಿರುದ್ಧ ಸರಿಯಾದ ನೀತಿಯನ್ನು ಅನುಸರಿಸುತ್ತವೆ ಎಂಬ ಕಾರಣಕ್ಕಾಗಿ ಅವರನ್ನು ನಮ್ಮ ಹೆಗಲ ಮೇಲಿರಿಸಿ ಎತ್ತಿಹಿಡಿಯುವುದರಿಂದಲೂ ಕ್ರಾಂತಿಕಾರಿ ಬದಲಾವಣೆ ತರಲು ಸಾಧ್ಯವಿಲ್ಲ.

ಜಿ. ರಾಮಕೃಷ್ಣ ಮತ್ತು ಅವರ ಬಳಗ ಚೆನ್ನಾಗಿ ತಿಳಿದುಕೊಳ್ಳಬೇಕಾದ ವಿಷಯವೊಂದಿದೆ ಅದು, ವಾಸ್ತವತೆಗೆ ಕುರುಡಾಗಿರುವುದು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷವಲ್ಲ, ಇಂದಿರಾ ಗಾಂಧಿಯ "ಪ್ರಗತಿಪರತೆ" ಹಾಗೂ ಅವಳ ಸರ್ವಾಧಿಕಾರಿ ಪ್ರವೃತ್ತಿನ ಬೆನ್ನು ಹಿಂದಿನ ಆರ್ಥಿಕ ಆಧಾರವನ್ನರಿಯಲಾಗದ ಅವರ ಮತ್ತು ಅವರ ಬಳಗದ ಪೆಟಿಬೂರ್ಜ್ವಾ ಯೋಜನಾ ವಿಧಾನ.

ಜನರ ನಡುವೆ ಇಳಿಯದೇ ಹೋರಾಟದಲ್ಲಿ ಧುಮುಕದೆ, ಕೇವಲ ಮಾರ್ಕ್ಸ್‌ವಾದಿಗಳೆಂದು ಘೋಷಿಸಿಕೊಂಡು ತಿರುಗಾಡಿದ ಮಾತ್ರಕ್ಕೆ ಅವರ ಮನಸ್ಸಿನ ಸಂಕೋಚಗಳನ್ನು ತೆಗೆದೊಗೆಯುವುದು ಸಾಧ್ಯವಿಲ್ಲ. ಜನರ ಹೋರಾಟದ ಕಣದಿಂದ 1964 ರಲ್ಲಿ ಅವರ ಬಳಗ ದೂರವಾದಂದಿನಿಂದ ಅವರಿಗೆ ನಮ್ಮ ರಾಜ್ಯದಲ್ಲಿ ಸಿಗುತ್ತಿರುವ ಮತಗಳು ಯಾರವು? ಎಲ್ಲಿಯವು? ಏತಕ್ಕಾಗಿ ಅದನ್ನು ನೀಡುತ್ತಿದ್ದಾರೆ ಎಂಬುದನ್ನು ಅವರು ಸ್ವಲ್ಪ ಯೋಚಿಸಿ ನೋಡಬೇಕು. ಅವರು ತಮ್ಮ ಸಂಕೋಚಗಳನ್ನು ತೆಗೆದೊಗೆದು ಭಾರತದ ಸಂದರ್ಭದಲ್ಲಿ ಸೂಕ್ತವಾದ ಮಾರ್ಕ್ಸ್‌ವಾದಿ ಕಾರ್ಯಕ್ರಮವನ್ನು ಒಪ್ಪಿಕೊಳ್ಳುವುದು ಸೂಕ್ತ.

ಎಸ್. ಕೆ. ಪ್ರೆಸ್ ವರ್ಕರ್ಸ್ ಯೂನಿಯನಿನ ಮಹಾಸಭೆ

ಎಸ್. ಕೆ. ಪ್ರೆಸ್ ವರ್ಕರ್ಸ್ ಯೂನಿಯನಿನ 47 ನೇ ವಾರ್ಷಿಕ ಮಹಾಸಭೆಯು ಸಂಘದ ಅಧ್ಯಕ್ಷರಾದ ಕಾಂ. ಪಿ. ರಾಮಚಂದ್ರರಾವ್, ಇವರ ಅಧ್ಯಕ್ಷತೆಯಲ್ಲಿ ತಾ॥ 10-6-84 ರಂದು ಮಂಗಳೂರಿನ ಕೆಥೋಲಿಕ್ ಕ್ಲಬ್‌ನಲ್ಲಿ ಜರುಗಿತು.

ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಕಾಂ. ಸುಬ್ರಾಯ ನ್ಯಾಕ್ ಇವರು ಸಭಿಕರನ್ನು ಹಾಗೂ ಅತಿಥಿಗಳನ್ನು ಸ್ವಾಗತಿಸಿದರು.

ಕಳೆದ ಮಹಾಸಭೆಯ ನಂತರ ನಮ್ಮ ದೇಶದ ಕಾರ್ಮಿಕ ನಾಯಕರಾದ ಹಾಗೂ ದೇಶದ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಯ ಓರ್ವ ಅಗ್ರಗಣ್ಯ ಮುಂದಾಳು ಕಾಂ. ಪ್ರಮೋದ್ ದಾಸ್‌ಗುಪ್ತ ಹಾಗೂ ತಮ್ಮ ಜಿಲ್ಲೆಯ ರೈತ ಕಾರ್ಮಿಕರ ಮುಂದಾಳು ಜಿ. ಕೊರಗಪ್ಪ ರೈ ಇವರುಗಳ ಮರಣಕ್ಕೆ ಹಾಗೂ ತಮ್ಮಿಂದ ಅಗಲಿದ ಇತರ ಕಾರ್ಮಿಕ ನಾಯಕರುಗಳಿಗೆ, ಸಭೆಯು ಶ್ರದ್ಧಾಂಜಲಿಯನ್ನು ಅರ್ಪಿಸಿತು.

ಕಾರ್ಯದರ್ಶಿ ಜಿ. ಉಮನಾಥ್ ಮತ್ತು ಕೋಶಾಧಿಕಾರಿ ಶೀನಪ್ಪ ಅಂಚನ್ ಇವರುಗಳು ಒಪ್ಪಿಸಿದ ವಾರ್ಷಿಕ ವರದಿ ಮತ್ತು ವಾರ್ಷಿಕ ಲೆಕ್ಕ ಪತ್ರಗಳನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

ಮುಂದಿನ ವರ್ಷದ ನೂತನ ಪದಾಧಿಕಾರಿಗಳ ಸ್ಥಾನಕ್ಕೆ ಪಿ. ರಾಮಚಂದ್ರರಾವ್ (ಅಧ್ಯಕ್ಷ) ಕೆ ಮೂಸಬ್ಬ, ಯು. ಪಿ. ಡಿಸೋಜ (ಉಪಾಧ್ಯಕ್ಷರು) ಬಿ. ಉಮನಾಥ್ (ಕಾರ್ಯದರ್ಶಿ) ಕೆ. ಮಂಜುನಾಥ್, ಸದಾಶಿವ ಶೆಟ್ಟಿ, ವಸಂತ ಕೆ. (ಜೊತೆ ಕಾರ್ಯದರ್ಶಿಗಳು) ಕೆ. ಶೀನಪ್ಪ ಅಂಚನ್ (ಕೋಶಾಧಿಕಾರಿ) ಅಲ್ಲದೆ 31 ಜನರ ಕಾರ್ಯಕಾರಿ ಸಮಿತಿಯನ್ನು ಸರ್ವಾನುಮತದಿಂದ ಸಭೆಯು ಅಂಗೀಕರಿಸಿತು. ಸಭಿಕರಲ್ಲಿ ಕೆ. ನಾರಾಯಣ ಶೆಟ್ಟಿ, ಸುಬ್ರಾಯ ನ್ಯಾಕ್, ಯು. ಡಿ. ಡಿಸೋಜ, ಕೆ. ಲಕ್ಷ್ಮಣ ಇವರುಗಳು ಸಂಘಟನೆಯನ್ನು ಬಲಪಡಿಸುವ ಬಗ್ಗೆ ಮಾತನಾಡಿದರು.

ಅಧ್ಯಕ್ಷ ಸ್ಥಾನದಿಂದ ಕಾ. ಪಿ. ರಾಮಚಂದ್ರರಾವ್ ಅವರು ಮಾತನಾಡುತ್ತಾ, ದೇಶದ ರಾಜಕೀಯ, ಹಾಗೂ ಆರ್ಥಿಕ ಪರಿಸ್ಥಿತಿಯ ಅಸ್ಥಿರತೆಯನ್ನು ವಿವರಿಸಿ, ಇದಕ್ಕೆಲ್ಲಾ ಕೇಂದ್ರ ಸರಕಾರದ ಬಂಡವಾಳ ಶಾಹಿ ನೀತಿಯೇ ಕಾರಣವಾಗಿದ್ದು, ಇಂದು ದೇಶದಲ್ಲಿ ಎಲ್ಲೆಲ್ಲೂ, ಜಾತಿ, ಭಾಷೆ, ಗಡಿ, ಕೋಮು ಗಲಭೆಯೇ ಮೊದಲಾದ ಸಮಸ್ಯೆಗಳು ಕಾರ್ಮಿಕರ ಒಗ್ಗಟ್ಟು ಮತ್ತು ಭದ್ರತೆಗೆ ಮಾರಕವಾಗಿದ್ದು, ಇದನ್ನೆಲ್ಲಾ ಎದುರಿಸಲು, ಕಾರ್ಮಿಕರು ಎಚ್ಚರದಿಂದಿರಬೇಕಾದ ಕಾಲ ಸನ್ನಿಹಿತವಾಗಿದೆ ಎಂದು ನುಡಿದರು.

ಕೊನೆಯಲ್ಲಿ ಜೊತೆ ಕಾರ್ಯದರ್ಶಿ ಕೆ. ಮಂಜುನಾಥ್‌ರು ಧನ್ಯವಾದ ಅರ್ಪಣೆ ಮಾಡುವುದರೊಂದಿಗೆ ಸಭೆ ಮುಕ್ತಾಯವಾಯಿತು.

ಸಾಹಿತಿ ಶೊಲೊಖೊವ್ ನೆನಪಿಗೆ ಸ್ಮಾರಕ

ಇತ್ತೀಚೆಗೆ ತೀರಿಕೊಂಡ ಸೋವಿಯೆತ್ ಸಾಹಿತಿ ಮಿಖಾಯಿಲ್ ಶೊಲೊಖೊವ್ ಅವರ ನೆನಪನ್ನು ಚಿರಸ್ಥಾಯಿಯಾಗಿಸಲು ಸಿ. ಪಿ. ಎಸ್. ಯು. ಕೇಂದ್ರ ಸಮಿತಿ ಮತ್ತು ಸೋವಿಯೆತ್ ಒಕ್ಕೂಟದ ಸಚಿವರುಗಳ ಮಂಡಳಿ ಒಂದು ನಿರ್ಣಯವನ್ನು ಕೈಗೊಂಡಿವೆ. ಮಾಸ್ಕೋದಲ್ಲಿ ಶೊಲೊಖೊವ್ ಅವರ ನೆನಪಿಗಾಗಿ ಒಂದು ಸ್ಮಾರಕವನ್ನು ನಿರ್ಮಿಸಲಾಗುವುದು. ಮಾಸ್ಕೋ ಮತ್ತು ರೊಸ್ತೊ-ದಾನ್‌ನ ರಸ್ತೆಗಳಿಗೆ, ವಶನ್‌ಸ್ಕಾಯೆಯಲ್ಲಿ ಅಧ್ಯಾಪಕರ ತರಬೇತಿ ಶಾಲೆಗೆ, ಕಜಾಖಸ್ತಾನದಲ್ಲಿ ಮೂರು ಗ್ರಂಥಾಲಯಗಳಿಗೆ ಹಾಗೂ ಕೃಷಿಕ್ಷೇತ್ರವೊಂದಕ್ಕೆ ಮತ್ತು ವ್ಯಾಪಾರಿ ನಾವೆಯೊಂದಕ್ಕೆ ಶೊಲೊಖೊವ್ ಅವರ ಹೆಸರಿಡಲು ಯೋಜಿಸಲಾಗಿದೆ.

REG KRNU-188 MAG[2]PRB DECR 319/78-79

……ರೈತ ಕಾರ್ಮಿಕರ ಹೋರಾಟದಲ್ಲಿ ಹೊಸ ಹೆಜ್ಜೆ

(1 ನೇ ಪುಟದಿಂದ)

ಪಿಕೆಟಿಂಗ್ ಹೂಡಿದರು. ವಿಕ್ರಾಂತ್ ಟೈರ್ಸ್, ಪಾಸ್‌ಪ್ರಕಾಶ್ ಹೋಟೆಲ್, ಪಾಮ್ ಮತ್ತು ಇಲ್ಯಾಟ್ ಪ್ರಾಡಕ್ಟ್ಸ್‌ನ ಕಾರ್ಮಿಕರು ಇದರಲ್ಲಿ ಭಾಗವಹಿಸಿದ್ದರು. ಮೋಹನ್ ಕುಮಾರ್ ಮುಂತಾದವರು ಮುಖಂಡತ್ವ ವಹಿಸಿದ್ದರು. ಅಲ್ಲದೆ ಪೌರ ಕಾರ್ಮಿಕರು ಮತ್ತು ಲಾರಿ ಚಾಲಕರು ಮುಷ್ಕರ ನಡೆಸಿದರು. ಪೌರ ಕಾರ್ಮಿಕರು ನಡೆಸಿದ ಪಿಕೆಟಿಂಗ್ ಕಾರ್ಯಕ್ರಮದಲ್ಲಿ 203 ಮಂದಿ ಬಂಧನಕ್ಕೊಳಗಾದರು. ಸಿ. ಕೆ. ಮೋನ್, ತಿಮ್ಮೇಗೌಡ ಮುಂತಾದವರು ಇದರ ನಾಯಕತ್ವ ವಹಿಸಿದ್ದರು.

ಮಂಗಳೂರು

ದ. ಕನ್ನಡ ಜಿಲ್ಲೆಯಾದ್ಯಂತ ಯಶಸ್ವೀ ಪಿಕೆಟಿಂಗ್ ನಡೆದ ವರದಿಗಳು ಬಂದಿವೆ. ಮಂಗಳೂರಿನಲ್ಲಿ ಜಿಲ್ಲಾಧಿಕಾರಿ ಕಚೇರಿ ಮುಂದೆ ರೈತರೂ ಕಾರ್ಮಿಕರೂ, ಪಿಕೆಟಿಂಗ್ ನಡೆಸಿದ್ದಾರೆ. ಇದಕ್ಕೆ ಮೊದಲು ನಡೆದ ಮೆರವಣಿಗೆಯಲ್ಲಿ ಭಾರಿ ಸಂಖ್ಯೆಯಲ್ಲಿ ಜನರು ಭಾಗವಹಿಸಿದ್ದರು. ಕಾ. ಕೆ. ಆರ್. ಶ್ರೀಯಾನ್‌ರವರು ನೇತೃತ್ವ ವಹಿಸಿದ್ದರು. ಪಿಕೆಟಿಂಗ್‌ನಲ್ಲಿ 2500 ಮಂದಿಯನ್ನು ಪೋಲಿಸರು ಬಂಧಿಸಿದ್ದಾರೆ

ದ. ಕನ್ನಡ ಜಿಲ್ಲೆಯಲ್ಲಿ ಸುಮಾರು 30,000 ಮಂದಿ ಸಂಘಟಿತ ಕಾರ್ಮಿಕರು ಮುಷ್ಕರದಲ್ಲಿ ಭಾಗವಹಿಸಿದ್ದರೆಂದು ತಿಳಿದು ಬಂದಿದೆ.

ಚಾಮರಾಜ ನಗರ

ಬೀಡಿ ಕಾರ್ಮಿಕರ ಸಂಘ ಸ್ಥಳೀಯ ಜ್ಯೋತಿ ಹೋಂ ಇಂಡಸ್ಟ್ರೀಸ್‌ನ ಡಿಪೋದಮುಂದೆ ಪಿಕೆಟಿಂಗ್ ನಡೆಸಿತು. ಸಂಜೆ ನಗರದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ನಡೆದು ಸಾರ್ವಜನಿಕ ಸಭೆ ನಡೆಯಿತು. ಎಸ್.ಎಫ್.ಐ. ಅಧ್ಯಕ್ಷರಾದ ಆರ್. ಜಯಕುಮಾರ್ ಡಿ. ವೈ ಎಫ್. ಐ. ಕಾರ್ಯದರ್ಶಿ ಜಿ. ಜಯರಾಂ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಗುಂಡ್ಲುಪೇಟೆ

ಗುಂಡ್ಲುಪೇಟೆ ತಾಲ್ಲೂಕಿನ ಸುಮಾರು 3000 ಬೀಡಿ ಕಾರ್ಮಿಕರು ಮುಷ್ಕರ ಹೂಡಿ ಪಿಕೆಟಿಂಗ್ ನಡೆಸಿದರು. ಸಂಘದ ಅಧ್ಯಕ್ಷರಾದ ಕಾ. ಎಂ. ಎನ್. ಉಗ್ರಪ್ಪನವರು ಇದರ ನಾಯಕತ್ವವಹಿಸಿದ್ದರು.

ಚಿಕ್ಕಬಳ್ಳಾಪುರ

ಅರ್ಧಕ್ಕಿಂತ ಹೆಚ್ಚು ಭಾಗ ಮಹಿಳೆಯರೇ ಭಾಗವಹಿಸಿದ್ದ ಭಾರಿ ಮೆರವಣಿಗೆ ಅಸಿಸ್ಟೆಂಟ್ ಕಮಿಷನರ್ ಕಚೇರಿ ಮುಂದೆ ಪಿಕೆಟಿಂಗ್ ನಡೆಸಿತು. ಇದರಲ್ಲಿ ರೈತರು ಕೃಷಿ ಕಾರ್ಮಿಕರು ಬೀಸ್ಟ್ ಕಾರ್ಮಿಕರು, ಕಲ್ಲಿನ ಕೆಲಸ ಮಾಡುವವರು ಇದ್ದರು. 170 ಮಂದಿ ಬಂಧಿತರಾದರು. ಇದರಲ್ಲಿ 70 ಮಂದಿ ಮಹಿಳೆಯರು. ಕಾರ್ಯಕ್ರಮದ ನೇತೃತ್ವವನ್ನು ಪ್ರಾಂತ ರೈತ ಸಂಘದ ಉಪಾಧ್ಯಕ್ಷರಾದ ಲಕ್ಷ್ಮಯ್ಯ, ಮುನಿಶಾಮಿ, ಶಿವಪ್ಪ, ಸತ್ಯನಾರಾಯಣರಾವ್, ಕೃಷ್ಣಪ್ಪ, ಸುಬ್ರಮಣಿ, ಚಂದ್ರಶೇಖರ್, ಇನ್ನಿತರರು ವಹಿಸಿದ್ದರು.

ಬಾಗೇಪಲ್ಲಿ

ಸುಮಾರು 250 ಮಂದಿ ರೈತರು ತಹಸೀಲ್ದಾರ್ ಕಚೇರಿ ಮುಂದೆ ಪಿಕೆಟಿಂಗ್ ನಡೆಸಿದರು. ಸುಮಾರು 5 ಗಂಟೆಕಾಲ ಕೆಲಸ ಸ್ಥಗಿತಗೊಂಡಿತ್ತು. ತಹಸೀಲ್ದಾರ್‌ರಿಗೆ ಮನವಿ ಸಲ್ಲಿಸಲಾಯಿತು. ಕಾರ್ಯಕ್ರಮದ ನೇತೃತ್ವವನ್ನು ಶಾಸಕರಾದ ಕಾ. ಅಪ್ಪಾಸ್ವಾಮಿರೆಡ್ಡಿ ಮತ್ತು ಶ್ರೀ ರಾಮರೆಡ್ಡಿ ವಹಿಸಿದ್ದರು.

ತುಮಕೂರು

ಬೆಳಗ್ಗೆ 10-30ಕ್ಕೆ ಪ್ರಾರಂಭಗೊಂಡ ಪಿಕೆಟಿಂಗ್ ಕಾರ್ಯಕ್ರಮ ಮಧ್ಯಾಹ್ನದವರೆವಿಗೂ ನಡೆಯಿತು. ನಂತರ ಪಿಕೆಟಿಂಗ್‌ನಲ್ಲಿ ಭಾಗವಹಿಸಿದ್ದ ಸುಮಾರು 300 ಜನರನ್ನು ಪೋಲೀಸರು ಬಂಧಿಸಿದರು.

ಸಿ. ಪಿ. ಐ. (ಎಂ) ಜಿಲ್ಲಾ ಕಾರ್ಯದರ್ಶಿ ಕೆ. ಆರ್. ನಾಯಕ್ ಜಿಲ್ಲಾ ರೈತ ಸಂಘದ ಅಧ್ಯಕ್ಷ ಟಿ ಕೆ. ಗೋವಿಂದರಾಜು, ದಾಸಪ್ಪ, ಎಚ್. ಸಿ. ಚನ್ನಪ್ಪ ಇವರುಗಳನ್ನೊಳಗೊಂಡು ನಗರದ ಬೀಡಿ ಕಾರ್ಮಿಕರೂ ಸಹ ಬಂಧಿತರಾಗಿದ್ದರು. ಮಕ್ಕಳನ್ನು ಹೊತ್ತ ಮಹಿಳೆಯರು ಈ ಚಳುವಳಿಯಲ್ಲಿ ಭಾಗವಹಿಸಿದ್ದು ಒಂದು ವಿಶೇಷ. ಬಂಧಿತರಾದವರನ್ನೆಲ್ಲಾ ಮಧ್ಯಾಹ್ನದ ನಂತರ ಮೊಕದ್ದಮೆ ದಾಖಲುಮಾಡಿ ಬಿಡುಗಡೆ ಮಾಡಿದರು

ಪುತ್ತೂರು

ಪುತ್ತೂರಿನಲ್ಲಿ ಬೆಳಿಗ್ಗೆ ಆರಂಭವಾದ ಮಳೆಯನ್ನು ಲೆಕ್ಕಿಸದೆ ಮಹಿಳೆಯರೂ ಸೇರಿದಂತೆ ಸರ್ಕಾರಿ ಭೂಮಿಯಲ್ಲಿ ವಾಸಿಸುವ ನೂರಾರು ಬಡಜನರು ನಗರದ ಮುಖ್ಯ ಬೀದಿಗಳಲ್ಲಿ ಘೋಷಣೆ ಕೂಗುತ್ತಾ ತಾಲ್ಲೂಕು ಕಚೇರಿ ಎದುರು ಪಿಕೆಟಿಂಗ್ ನಡೆಸಿದರು.

ಪಿಕೆಟಿಂಗ್‌ನ ನೇತೃತ್ವವನ್ನು ರೈತ ಕಾರ್ಮಿಕ ಮುಂದಾಳು ಮತ್ತು ನ್ಯಾಯವಾದಿ ಸೂರ್ಯನಾರಾಯಣ ಭಟ್, ತಾಲ್ಲೂಕು ರೈತ ಸಂಘದ ಮುಂದಾಳುಗಳಾದ ತಂಬನ್, ಟಿ.ಸಿ. ಮಾರ್ಕೋಸ್, ಚನಿಯಪ್ಪಗೌಡ ಮೊದಲಾದವರು ವಹಿಸಿದ್ದರು. ತಹಸೀಲ್ದಾರರು ಪಿಕೆಟಿಂಗ್ ನಡೆಯುತ್ತಿದ್ದ ಸ್ಥಳಕ್ಕೆ ಭೇಟಿನೀಡಿ ರೈತರ ಸಮಸ್ಯೆಗಳನ್ನು ಸರ್ಕಾರಕ್ಕೆ ತಿಳಿಸುವುದಾಗಿ ಹೇಳಿದರು. ನಂತರ ಪಿಕೆಟಿಂಗ್ ಕಾರ್ಯಕ್ರಮವನ್ನು ಮುಂದುವರಿಸಿದ 150ಕ್ಕೂ ಮೇಲ್ಪಟ್ಟು ಜನರನ್ನು ಬಂಧಿಸಿ ಸಂಜೆ ಬಿಡುಗಡೆ ಮಾಡಲಾಯಿತು.

ಸುಳ್ಯ

ಸುಳ್ಯದಲ್ಲೂ ಸಹ ಯಶಸ್ವಿ ಪಿಕೆಟಿಂಗ್ ನಡೆದ ವರದಿ ದೊರೆತಿದೆ. ಸುಮಾರು 500 ಕ್ಕಿಂತಲೂ ಹೆಚ್ಚಿಗೆ ಜನ ಸೇರಿದ್ದ ಪಿಕೆಟಿಂಗ್ ನೇತೃತ್ವವನ್ನು ಪ್ರಾಂತ ರೈತ ಸಂಘದ ಮುಂದಾಳು ಎಂ.ಕೆ.ಭಟ್, ತಾಲ್ಲೂಕು ರೈತ ಸಂಘದ ಮುಂದಾಳುಗಳಾದ ಮೋನಪ್ಪಗೌಡ, ಬಾಲಕೃಷ್ಣಗೌಡ, ಸಿ. ಪರಮೇಶ್ವರಗೌಡ, ಭಾಸ್ಕರರಾವ್ ಪಿ. ಕೆ. ಮೂಸ, ಬೀಡಿ ಕಾರ್ಮಿಕ ಸಂಘದ ಮುಂದಾಳು ಫಕೀರಪಾಟಾಳಿ ರಬ್ಬರ್ ತೋಟದ ಕೆಲಸಗಾರರ ಸಂಘದ ದಾಸಯ್ಯ ಮುಂತಾದವರು ವಹಿಸಿದ್ದರು.

ಸುಮಾರು 500 ಕ್ಕೂ ಹೆಚ್ಚು ಜನರನ್ನು ಪೋಲೀಸರು ಬಂಧಿಸಿ ಸಂಜೆ ಬಿಡುಗಡೆ ಮಾಡಿದರು.

ಸಿರಸಿ

ಸಿರಸಿಯಲ್ಲಿ ಮಧ್ಯಾಹ್ನ ಒಂದೂವರೆ ಗಂಟೆಗೆ ಅಸಿಸ್ಟೆಂಟ್ ಕಮಿಷನರ್‌ರವರ ಕಚೇರಿ ಎದುರು ಪಿಕೆಟಿಂಗ್ ನಡೆಸಲಾಯಿತು. ಪಿಕೆಟಿಂಗ್ ನಡೆಯುತ್ತಿದ್ದ ಸ್ಥಳಕ್ಕೆ ಆಗಮಿಸಿದ ಅಸಿಸ್ಟೆಂಟ್ ಕಮಿಷನರ್‌ರವರು ರೈತರ ಬೇಡಿಕೆಗಳನ್ನು ಪರಿಶೀಲಿಸಿ ಪರಿಹರಿಸಲು ಪ್ರಯತ್ನಿಸುವುದಾಗಿ ಆಶ್ವಾಸಯಿತ್ತರು.

ನಂತರ ಮೆರವಣಿಗೆಯಲ್ಲಿ ಸಿರಸಿ ಪುರಸಭೆಯ ಎದುರು ಸಭೆ ನಡೆಸಿದರು ಕಾ. ಎಂ. ಎಸ್. ಧಾರೇಶ್ವರ್‌ರವರು ಸಭೆಯನ್ನುದ್ದೇಶಿಸಿ ಮಾತನಾಡಿದರು.

ಬಿಜಾಪುರ

ಬಿಜಾಪುರ ನಗರಸಭೆ ಕೆಲಸಗಾರರು ಬಾಗಲಕೋಟೆ ಸಿಮೆಂಟ್ಸ್, ಎಸ್. ಎಫ್. ಐ. ನವರೂ ಸಹ ಭಾಗವಹಿಸಿದ್ದ ಮೆರವಣಿಗೆ ರೈತಸಂಘ ಆಫೀಸಿನಿಂದ ನಗರದ ಪ್ರಮುಖ ಬೀದಿಗಳಲ್ಲಿ ಹೊರಟು ತಹಸೀಲ್ದಾರ್, ಬಿ.ಡಿ.ಓ ಮತ್ತು ಜಿಲ್ಲಾಧಿಕಾರಿಗಳ ಕಚೇರಿಗಳ ಎದುರು ತಂಡ ತಂಡವಾಗಿ ಪಿಕೆಟಿಂಗ್ ನಡೆಸಿದರು. ತಹಸೀಲ್ದಾರ್ ಕಚೇರಿ ಎದುರು ಸೇರಿದ್ದ ಬೃಹತ್ ಸಭೆಯನ್ನುದ್ದೇಶಿಸಿ, ಭೀಮಸಿ ಕಲಾದಗಿ, ಎನ್. ಕೆ. ಉಪಾಧ್ಯಾಯರವರುಗಳು ಮಾತನಾಡಿದರು.

ಪಿಕೆಟಿಂಗ್‌ನಲ್ಲಿ ಭಾಗವಹಿಸಿದ್ದ ನೂರು ಮಹಿಳೆಯರೂ ಸೇರಿದಂತೆ ಒಂದು ಸಾವಿರ ಜನರನ್ನು ಬಂಧಿಸಿ ನಂತರ ಬಿಡುಗಡೆ ಮಾಡಲಾಯಿತು.

ಉಡುಪಿ

ಇಲ್ಲಿ ನಡೆದ ಪಿಕೆಟಿಂಗ್‌ನಲ್ಲಿ ಭಾಗವಹಿಸಿದ್ದ 503 ಮಂದಿ ರೈತರನ್ನು ಪೋಲೀಸರು ಬಂಧಿಸಿದರು. ಬೆಳಿಗ್ಗೆ ಬಂಧಿಸಿದ ಇವರನ್ನು ಸಂಜೆ ಬಿಡುಗಡೆ ಮಾಡಿದರು. ಹೋರಾಟಕ್ಕೆ ಸಾರಿಗೆ ಕಾರ್ಮಿಕರೂ ಸಹ ಬೆಂಬಲ ವ್ಯಕ್ತಪಡಿಸಿದ್ದರು. ಸಂಜೆ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಕಾ. ಡೇವಿಡ್ ಕಾರ್ಕಡ ಮಾತನಾಡಿದರು.

ಕುಂದಾಪುರ

ಸರಕಾರಿ ಕಚೇರಿಗಳ ಎದುರು ಸಾಮೂಹಿಕ ಪಿಕೆಟಿಂಗ್ ಕಾರ್ಯಕ್ರಮದಲ್ಲಿ ಹೆಂಚಿನ ಕಾರ್ಮಿಕರು, ಬೀಡಿ ಕಾರ್ಮಿಕರು, ಸಾರಿಗೆ ನೌಕರರು ಹಾಗೂ ರೈತ-ಕೃಷಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ತಾಲೂಕು ರೈತ ಸಂಘದ ಅಧ್ಯಕ್ಷ ದಾಸಭಂಡಾರಿ ಮತ್ತು ನಗರಸಭಾ ಸದಸ್ಯ ವಿ. ನರಸಿಂಹ ಇವರ ನೇತೃತ್ವದಲ್ಲಿ ಒಂದು ತಂಡ, ನಂತರ ಹಂಚಿನ ಕಾರ್ಮಿಕರ ಸಂಘದ ಕಾರ್ಯದರ್ಶಿ ಸಿ. ನಾರಾಯಣ ಮತ್ತು ಕೆ. ಶಂಕರ್‌ರವರ ನೇತೃತ್ವದಲ್ಲಿ ಮತ್ತೊಂದು ತಂಡ ಹೆಚ್ಚಿನ ಸಂಖ್ಯೆಯಲ್ಲಿ ಬಂಧನಕ್ಕೊಳಗಾದರು.

ಎಸ್ ಎಫ್. ಐ. ಮತ್ತು ಡಿ. ವೈ. ಎಫ್. ಐ. ಕಾರ್ಯಕರ್ತರೂ ಸಹ ಪಿಕೆಟಿಂಗ್‌ನಲ್ಲಿ ಭಾಗವಹಿಸಿ ಬಂಧನಕ್ಕೊಳಗಾದರು.

ರೈತ-ಕಾರ್ಮಿಕರಿಗೆ ಅಭಿನಂದನೆ

ಜೂನ್ 11 ರ ರಾಜ್ಯವ್ಯಾಪೀ ಪಿಕೆಟಿಂಗ್‌ನಲ್ಲಿ ಪಾಲ್ಗೊಂಡು ಅಪಾರ ಯಶಸ್ಸನ್ನು ಗಳಿಸಿಕೊಟ್ಟ ರಾಜ್ಯದ ರೈತ–ಕಾರ್ಮಿಕರನ್ನು ಸಿ.ಐ.ಟಿ.ಯು ರಾಜ್ಯ ಸಮಿತಿಯ ಪರವಾಗಿ ಪ್ರಧಾನ ಕಾರ್ಯದರ್ಶಿ ಕಾ. ಸಿ. ನಂಜುಂಡಪ್ಪ ಅಭಿನಂದಿಸಿದಾರೆ. ಮತ್ತು ಕಾರ್ಮಿಕರ–ರೈತರ ಸಖ್ಯತೆ ಮತ್ತು ಐಕ್ಯತೆ ಬಲಗೊಳಿಸಲೆಂದು ಹಾರೈಸಿದ್ದಾರೆ.

ಡಿ. ವೈ. ಎಫ್. ಐ. ಸಭೆಗಳು

1–6–84 ರಂದು ಕುಂದಾಪುರದಲ್ಲಿ ಡಿ. ವೈ. ಎಫ್. ಐ. ಸಭೆಯು ಕಾ. ಶಂಕರಖಾರ್ವಿಯವರ ಅಧ್ಯಕ್ಷತೆಯಲ್ಲಿ ಸೇರಿತು. ಡಿ. ವೈ. ಎಫ್. ಐ. ರಾಜ್ಯ ಸಮಿತಿಯ ಕಾರ್ಯದರ್ಶಿ ಕಾ. ಶಿವರಾಂ ಡಿ.ವೈ.ಎಫ್.ಐ. ಕಾರ್ಯಕ್ರಮವನ್ನು ವಿವರಿಸಿದರು. ಮತ್ತು ಡಿ. ವೈ. ಎಫ್. ಐ. ರಾಜ್ಯ ಸಮಿತಿಯ ಅಧ್ಯಕ್ಷ ಕಾ. ಮಹಾಬಲ ವಡೇರ ಹೋಬ್ಳಿಯವರು ಯುವಜನರು ದೇಶದ ಐಕ್ಯತೆಯ ರಕ್ಷಣೆಗಾಗಿ ಹೋರಾಟ ನಡೆಸಬೇಕೆಂದು ವಿನಂತಿಸಿದರು. ಪ್ರಾರಂಭದಲ್ಲಿ ಹೆಚ್. ನರಸಿಂಹನವರು ಸ್ವಾಗತ ಮಾಡಿದರು. ಕೊನೆಯಲ್ಲಿ ಕಾ. ನಾರಾಯಣ ಆಚಾರ್ ವಂದನಾರ್ಪಣೆ ಮಾಡಿದರು.

ಮಂಗಳೂರು

ಮಂಗಳೂರು ತೊಕ್ಕೊಟ್ಟು ಪ್ರದೇಶದಲ್ಲಿ 3–6–84 ರಂದು ಕಾ. ಕೃಷ್ಣಪ್ಪನವರ ಅಧ್ಯಕ್ಷತೆಯಲ್ಲಿ ಡಿ. ವೈ. ಎಫ್. ಐ. ಸಭೆ ಸೇರಿತು ಮುಖ್ಯಾಧಿಕಾರಿಗಳಾಗಿ ಕಾ. ಬಿ. ಮಾಧವ ಮತ್ತು ಕಾ. ಮಹಾಬಲ ವಡೇರಹೋಬ್ಳಿ [ರಾಜ್ಯ ಸಮಿತಿ ಅಧ್ಯಕ್ಷ] ಹಾಗೂ ಕಾ. ಶಿವರಾಮ್ [ರಾಜ್ಯ ಸಮಿತಿ ಕಾರ್ಯದರ್ಶಿ] ಇವರು ಭಾಗವಹಿಸಿದ್ದರು. ಸಭೆಯಲ್ಲಿ ದೇಶದ ಯುವಜನರ ಪರಿಸ್ಥಿತಿಯನ್ನು ಹಾಗೂ ಡಿ. ವೈ. ಎಫ್. ಐ. ಕಾರ್ಯಕ್ರಮವನ್ನು ವಿವರಿಸಿದರು. ಕಾ. ಶಿವಾನಂದ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಪ್ರಾರಂಭದಲ್ಲಿ ರಮೇಶ್ ಉಳ್ಳಾಳ್ ಸ್ವಾಗತಮಾಡಿದರು. ಮಂಗಳೂರಿನ ಕೆಥೊಲಿಕ್ ಹಾಲಿನಲ್ಲಿ 3–6–84 ರಂದು ಡಿ. ವೈ. ಎಫ್. ಐ. ಸಭೆಯು ಕಾ. ಸದಾಶಿವ ಶೆಟ್ಟಿ (ಕಾರ್ಪೊರೇಟರ್) ಇವರ ಅಧ್ಯಕ್ಷತೆಯಲ್ಲಿ ಸೇರಿತು. ಮುಖ್ಯಾಧಿಕಾರಿಗಳಾಗಿ ಕಾ. ಬಿ. ಮಾಧವ, ಕಾ. ವಡೇರಹೋಬ್ಳಿ ಕಾ. ಶಿವರಾಮ್ ಭಾಗವಹಿಸಿದ್ದರು. ಪ್ರಾರಂಭದಲ್ಲಿ ಕಾ. ಶಿವಾನಂದ ಸ್ವಾಗತ ಮಾಡಿದರು. ಕೊನೆಯಲ್ಲಿ ಕಾ. ಜಯಂತಕುಮಾರ್ ಧನ್ಯವಾದ ಮಾಡಿದರು.

Printed & Publishedby P. Ramachandra Raoby him on behalf of the Communist Pary of India (Marxist) Karnataka State Committee, K. V. Temple Street, Sultanpet, Bangalore-560053. Editorial and managerial office, L-56, K. V. Temple Street, Sultanpet, B-53. Phone : 24154
Editor : P. Ramachandra Rao Managing Editor : N. K. Upadhyaya